INDIAN JOURNAL OF HISTORY AND ARCHAEOLOGY
ISSN (e):2582-225X
Vol-3, Issue -3, September-October, 2021,
PageNo,45-63
Peer Reviewed Journal, Referred Journal

# 21ನೇ ಶತಮಾನದಲ್ಲಿ ದಲಿತರ ಆರ್ಥಿಕ ಸಬಲೀಕರಣ

ಡಾ.ಗೋಪಾಲ ಎಸ್.[1]

ಅಂಬೇಡ್ಕರ್ ತಮ್ಮ ವಿಶಿಷ್ಟ ಆರ್ಥಿಕ ಚಿಂತನೆಗಳನ್ನು ಹಲವಾರು ರಾಷ್ಟ್ರೀಯ ಮತ್ತು ಅಂತರರಾಷ್ಟ್ರಿಯ ನಿಯತಕಾಲಿಕೆಯಲ್ಲಿ ಪರಿಣಾಮಕಾರಿಯಾಗಿ ಮಂಡಿಸಿ ವಿಶ್ವದ ಗಮನಸೆಳೆದಿದ್ದಾರೆ. ಅವರು ಭಾರತೀಯ ಅರ್ಥವ್ಯವಸ್ಥೆಯನ್ನು ಮಾನವೀಯ ನೆಲೆಗಟ್ಟಿನಲ್ಲಿ ಪುನರಚಿಸಬೇಕೆಂದು ದೇಶದ ಆಡಳಿತಗಾರರಿಗೆ ಕರೆನೀಡಿದ್ದಾರೆ. ಭಾರತವನ್ನು ಆಧುನಿಕ ಯುಗದಲ್ಲಿ ಸುಖೀ ರಾಜ್ಯವನ್ನಾಗಿ ರೂಪುಗೊಳಿಸುವ ನಿಟ್ಟಿನಲ್ಲಿ ಶ್ರೇಷ್ಟ ಆರ್ಥಿಕ ವಿಚಾರಧಾರೆಗಳನ್ನೊಳಗೊಂಡ ಸಂವಿಧಾನ ರಚಿಸಿದರು.ರಾಜ್ಯ ನಿರ್ದೇಶಕ ತತ್ವಗಳು ಮೂಲಭೂತವಾಗಿ ಅಂಬೇಡ್ಕರ್‌ರವರ ಮಾನವೀಯ ಆರ್ಥಿಕ ಚಿಂತನೆಗಳನ್ನು ಪರಿಣಾಮಕಾರಿಯಾಗಿ ಅಭಿವ್ಯಕ್ತಗೊಳಿಸುತ್ತದೆ. ಅಂಬೇಡ್ಕರ್ ರಾಜಕೀಯ ಸ್ವಾತಂತ್ರ್ಯಕ್ಕಿಂತ ಸಾಮಾಜಿಕ ಮತ್ತು ಆರ್ಥಿಕ ಕ್ಷೇತ್ರಗಳಲ್ಲಿ ಸಮಾನತೆ, ಸ್ವಾತಂತ್ರ್ಯ, ಸಮಪಾಲು ಮತ್ತು ಸಮಬಾಳುಗಳಿಗೆ ಹೆಚ್ಚಿನ ಆದ್ಯತೆ ನೀಡಿದ್ದರು. ಸ್ವಾತಂತ್ರ್ಯಾನಂತರ ಸರ್ವರಿಗೂ ಸಮಬಾಳು ಮತ್ತು ಸರ್ವರಿಗೂ ಸಮಪಾಲುನ್ನು ಒದಗಿಸುವ ನಿಟ್ಟಿನಲ್ಲಿ ಮಾನವೀಯ ಮೌಲ್ಯಗಳನ್ನು ಆಧರಿಸಿದ ಶ್ರೇಷ್ಟ ಸಂವಿಧಾನವನ್ನು ಅಂಬೇಡ್ಕರ್ ರಚಿಸಿದರು.ಸಮಸ್ತ ಭಾರತೀಯರಿಗೂ ಮೂಲಭೂತ ಸೌಕರ್ಯಗಳನ್ನು ಒದಗಿಸುವುದರ ಜೊತೆಗೆ ಅವರೆಲ್ಲರ ಮಾನವ ಹಕ್ಕುಗಳನ್ನು ರಕ್ಷಿಸುವ ನಿಟ್ಟಿನಲ್ಲಿ ಅರ್ಥಪೂರ್ಣ ಆರ್ಥಿಕ ವ್ಯವಸ್ಥೆಯೊಂದನ್ನು ರೂಪಿಸಿಬೇಕು.ಕೃಷಿ, ಕೈಗಾರಿಕೆ ಮತ್ತು ಉದ್ಯೋಗ ಕ್ಷೇತ್ರಗಳಲ್ಲಿ ಸರ್ವಜನಾಂಗಗಳಿಗೂ ಸಮಾನ ಅವಕಾಶಗಳನ್ನು ಕಲ್ಪಿಸಿಕೊಡುವ ಸದಾಶಯದಿಂದ ಅಂಬೇಡ್ಕರ್ ರಾಜ್ಯ ನಿರ್ದೇಶಕ ತತ್ವಗಳನ್ನು ರೂಪಿಸಿದರು.ಮಾನವ ಸಂಪನ್ಮೂಲಗಳ ಸಮಗ್ರ ಅಭಿವೃದ್ಧಿಯೇ ದೇಶದ ನಿಜವಾದ ಅಭಿವೃದ್ಧಿಯೆಂಬುದನ್ನು ನೀತಿ ನಿರೂಪಕರು ಮನಗಾಣಬೇಕು.

ವೆಲೇರಿಯನ್ ರೊಡ್ರಿಗಸ್ (2002:01) ಅವರು ಅಂಬೇಡ್ಕರ್ ಅವರು ಭಾರತೀಯ ಅರ್ಥಶಾಸ್ತ್ರಕ್ಕೆ ನೀಡಿದ ಕೊಡುಗೆಯನ್ನು ಹೀಗೆ ಸ್ಮರಿಸುತ್ತಾರೆ."ಅಂಬೇಡ್ಕರ್‌ರವರು ಬಹಳ ಹಿಂದೆಯೇ

1. ಸಂಶೋಧನಾ ಸಹಾಯಕರು, ಡಾ.ಬಿ .ಆರ್.ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣ ಕೇಂದ್ರ ಮಾನಸ ಗಂಗೋತ್ರಿ. ಮೈಸೂರು

ರಾಜಕೀಯ ಆರ್ಥಿಕತೆ ಕುರಿತು ಕ್ರಾಂತಿಕಾರಕ ಚಿಂತನೆಗಳನ್ನು ವ್ಯಕ್ತಪಡಿಸಿದ್ದಾರೆ.ಅವರ ಆರ್ಥಿಕ ವಿಚಾರಧಾರೆಗಳು ಕೃಷಿ ಹಿಡುವಳಿ, ಭೂ ಸುಧಾರಣೆ, ಯೋಜನೆ, ಆಯವ್ಯಯ ಮಂಡನೆ, ಕೈಗಾರಿಕಾ ವ್ಯಾಜ್ಯಗಳು ಮತ್ತು ಕಾರ್ಮಿಕ ಸಂಬಂಧಗಳಿಗೆ ಸಂಬಂಧಿಸಿದಂತೆ ಮಾನವೀಯ ವಿಶ್ಲೇಷಣೆಗಳು ಮತ್ತು ಪರಿಹಾರಗಳನ್ನು ಒದಗಿಸಿದೆ.ಅಂಬೇಡ್ಕರ್‌ರವರು ಅಧಿಕೃತ ಮಾಹಿತಿ ಮೂಲಗಳನ್ನು ಆಧರಿಸಿ ತಮ್ಮ ಆರ್ಥಿಕ ಚಿಂತನೆಗಳನ್ನು ಅನೇಕ ವೇದಿಕೆಗಳು ಮತ್ತು ಪ್ರಕಟಣೆಗಳಲ್ಲಿ ಅಧಿಕಾರಯುತವಾಗಿ ಮಂಡಿಸಿದ್ದಾರೆ. ಅವರು ನೀಡಿರುವ ಪುನರ್‌ರಚಿಸುವಲ್ಲಿ ಅತ್ಯುಪಯುಕ್ತವಾಗಿದೆ. ಭಾರತವನ್ನು ಸುಖೀ ರಾಜ್ಯವನ್ನಾಗಿ ಕಟ್ಟುವಲ್ಲಿ ಅಂಬೇಡ್ಕರ್ ಅವರು ಆರ್ಥಿಕ ವಿಚಾರಧಾರೆಗಳು ಅತ್ಯಂತ ಸಹಕಾರಿಯಾಗಿದೆ.ಅವರು ಒಳಗೊಳ್ಳುವ ಆರ್ಥಿಕ ಅಭಿವೃದ್ಧಿ ಪರಿಕಲ್ಪನೆಯನ್ನು ಬಹಳಷ್ಟು ಹಿಂದೆಯೇ ಭಾರತೀಯ ಆಡಳಿತಗಾರರು ಮತ್ತು ಅರ್ಥಶಾಸ್ತ್ರಜ್ಞರಿಗೆ ಒದಗಿಸಿದ್ದಾರೆ".

ಅರ್ಥಶಾಸ್ತ್ರಜ್ಞರಾಗಿ ಅಂಬೇಡ್ಕರ್ ಅವರು ವ್ಯಕ್ತಿತ್ವವನ್ನು ಮಂಗೂರಕರ್ (1997:02)ಹೀಗೆ ಬಣ್ಣಿಸಿದ್ದಾರೆ. "ಅಂಬೇಡ್ಕರ್ ಅವರು ಆರ್ಥಿಕ ಚಿಂತನೆಗಳು ಮತ್ತು ಕೊಡುಗೆಗಳ ಮೇಲೆ ಭಾರತೀಯ ಸಂಶೋಧಕರು ಮತ್ತು ಇತಿಹಾಸಕಾರರು ಸೂಕ್ತ ರೀತಿಯ ಬೆಳಕನ್ನು ಚೆಲ್ಲಿರುವುದಿಲ್ಲ. ಅಂಬೇಡ್ಕರ್ ಅವರು ರಾಷ್ಟ್ರದ ಆರ್ಥಿಕ ಸಮಸ್ಯೆಗಳಿಗೆ ಅರ್ಥಪೂರ್ಣ ಪರಿಹಾರಗಳನ್ನು ಒದಗಿಸಿ ನಮ್ಮ ಆರ್ಥಿಕ ವ್ಯವಸ್ಥೆಗೆ ಅತ್ಯುಪಯುಕ್ತವಾದ ಸೈದ್ಧಾಂತಿಕ ಮತ್ತು ವ್ಯಾವಹಾರಿಕ ಚಿಂತನೆಗಳನ್ನು ಒದಗಿಸಿದ್ದಾರೆ. ಅವರ ಬಹಳಷ್ಟು ಆರ್ಥಿಕ ವಿಚಾರಧಾರೆಗಳು ಸಮಕಾಲೀನ ಪ್ರಸ್ತುತತೆಯನ್ನು ಹೊಂದಿದ್ದು ಭಾರತವನ್ನು ವಿಶ್ವದಲ್ಲಿ ಒಂದು ಶ್ರೇಷ್ಠ ಆರ್ಥಿಕ ಶಕ್ತಿಯನ್ನಾಗಿ ರೂಪಿಸುವ ಸಾಮಾರ್ಥ್ಯ ಹೊಂದಿದೆ".

ಅಮಾರ್ತ್ಯಸೇನ್ (2009:03) ಅಂಬೇಡ್ಕರ್ ಅವರು ಶ್ರೇಷ್ಠ ಅರ್ಥಶಾಸ್ತ್ರಜ್ಞರೆಂದು ಹೀಗೆ ಬಣ್ಣಿಸಿದ್ದಾರೆ."ಅಂಬೇಡ್ಕರ್ ಅಂತ್ಯೋದಯ ಅಭಿವೃದ್ಧಿ ಮಾದರಿಯ ಹರಿಕಾರರು.ಅವರಿಗೆ ಕೆಳಮುಖ ಆರ್ಥಿಕಾಭಿವೃದ್ಧಿ ಹೆಚ್ಚು ಪ್ರಿಯವಾಗಿತ್ತು.ಶತಶತಮಾನಗಳಿಂದ ಶೋಷಿತ ವರ್ಗಗಳನ್ನು ಆರ್ಥಿಕ ಮುಖ್ಯವಾಹಿನಿಯಿಂದ ಬ್ರಾಹ್ಮಣಶಾಹಿ ಮತ್ತು ಬಂಡವಾಳಶಾಹಿಗಳು ದುರುದ್ದೇಶದಿಂದ ದೂರವೇ ಇಟ್ಟಿದೆ.ಒಳಗೊಳ್ಳುವ ಆಡಳಿತ ಮತ್ತು ಅಭಿವೃದ್ಧಿ ಪ್ರಕ್ರಿಯೆಗಳಿಂದಲೇ ಶೋಷಿತರ ಸಬಲೀಕರಣ ಸಾಧ್ಯವಾಗುತ್ತದೆಂಬ ಅಂಬೇಡ್ಕರ್ ಆರ್ಥಿಕವಾದ ಆಧುನಿಕ ಸಮಾಜದಲ್ಲಿ ಔಚಿತ್ಯಪೂರ್ಣವಾಗಿದೆ. ಅಂತ್ಯೋದಯದ ಮೂಲಕ ಸರ್ವೋದಯದ ಕನಸನ್ನು ಸಾಕಾರಗೋಸಬೇಕೆನ್ನುವ ಅಂಬೇಡ್ಕರ್‌ವಾದ ಇಂದಿಗೂ ಕೂಡ ಪ್ರಸ್ತುತವಾಗಿದೆ".

ಅಂಬೇಡ್ಕರ್ ಭಾರತ ಕಂಡ ಶ್ರೇಷ್ಠ ಅರ್ಥಶಾಸ್ತ್ರಜ್ಞ ಆರ್ಥಿಕ ಅಸಮಾನತೆಯನ್ನು ನಿವಾರಿಸದ ಹೊರತು ಅಭಿವೃದ್ಧಿಯ ಫಲ ಕಟ್ಟಕಡೆಯ ಮನುಷ್ಯನಿಗೆ ಸಿಗುವುದಿಲ್ಲವೆಂಬ ತಾತ್ವಿಕ ನಿಲುವನ್ನು ಅವರು ಹೊಂದಿದ್ದಾರೆ. ಭಾರತದ ಜಾತಿ ವ್ಯವಸ್ಥೆ ಕೆಳಸ್ತರದ ಜನವರ್ಗಗಳಿಗೆ ಆರ್ಥಿಕ ಸಂಪನ್ಮೂಲ ಮತ್ತು ಅಧಿಕಾರಗಳನ್ನು ನಿರಾಕರಿಸಿರುವುದರಿಂದ ಜಾತಿವಿನಾಶದಿಂದಲೇ ಭಾರತವನ್ನು ಮತ್ತೊಂದು ಕಲ್ಯಾಣ

ರಾಜ್ಯವನ್ನಾಗಿ ರೂಪಿಸಲು ಸಾಧ್ಯ. ಅಲ್ಪಸಂಖ್ಯಾತ ಮೇಲ್ವರ್ಗಕ್ಕೆ ದೇಶದ ಸಂಪನ್ಮೂಲಗಳಲ್ಲಿ ಹೆಚ್ಚಿನ ಪಾಲು ಮತ್ತು ಬಹುಸಂಖ್ಯಾತ ಕೆಳವರ್ಗಕ್ಕೆ ದೇಶದ ಸಂಪನ್ಮೂಲಗಳಲ್ಲಿ ಕಡಿಮೆ ಪಾಲು ಇರುವುದು ಅಭಿವೃದ್ಧಿ ಮತ್ತು ಬಹುಸಂಖ್ಯಾತ ಕೆಳವರ್ಗಕ್ಕೆ ದೇಶದ ಸಂಪನ್ಮೂಗಳಲ್ಲಿ ಕಡಿಮೆ ಪಾಲು ಇರುವುದು ಅಭಿವೃದ್ಧಿ ವ್ಯವಸ್ಥೆಯ ಮಾನವೀಕರಣಕ್ಕೆ ಅಡ್ಡಗಲ್ಲಾಗಿದೆ. ಕೆಳವರ್ಗಗಳು ಇಂತಹ ಅಸಮಾನತೆಯ ಕಾರಣದಿಂದಾಗಿ ಹುಟ್ಟಿನಿಂದ ಸಾಯುವತನಕ ಪರಾವಲಂಬಿಗಳಾಗಿ ಉಳಿಯುವಂತಾಗಿದೆ.

ಅಂಬೇಡ್ಕರ್ ಅವರು ಭಾರತದ ಕೃಷಿ ಆರ್ಥಿಕತೆಯ ಬಗ್ಗೆ ಮಂಡಿಸಿದ ಚಿಂತನೆಗಳು ಅರ್ಥಪೂರ್ಣವಾಗಿದೆ.ಅವರು 1947ರಲ್ಲಿ 'ಸಾಮುದಾಯಿಕ ಕೃಷಿ ವ್ಯವಸ್ಥೆ'ಯನ್ನು ಪ್ರತಿಪಾದಿಸಿದರು. ಅವರ ಪ್ರಕರ ಕೃಷಿ ಭೂಮಿಯ ಖಾಸಗಿ ಮಾಲೀಕತ್ವದಲ್ಲಿ ಇರುವ ತನಕ ಕೃಷಿ ಕಾರ್ಮಿಕರಿಗೆ ನ್ಯಾಯೋಚಿತ ವೇತನ, ಸಾಮಾಜಿಕ ರಕ್ಷಣೆ ಮತ್ತು ಸೂಕ್ತ ಪ್ರತಿಫಲಗಳು ದೊರೆಯುವುದಿಲ್ಲ. ಈ ವ್ಯವಸ್ಥೆಯಲ್ಲಿ ಭೂ ಮಾಲೀಕರು, ಗೇಣಿದಾರರು ಮತ್ತು ಭೂರಹಿತ ಕಾರ್ಮಿಕರೆಂಬ ಭಿನ್ನ ಭೇದಗಳಿರುವುದಿಲ್ಲ. ಭೂ ಮಾಲೀಕರ ದಬ್ಬಾಳಿಕೆಯಿಂದ ಬಹುತೇಕ ದಲಿತರು ಮತ್ತು ಹಿಂದುಳಿದವರ್ಗಗಳನ್ನು ಪ್ರತಿನಿಧಿಸುವ ಕೃಷಿ ಕಾರ್ಮಿಕರನ್ನು ಮುಕ್ತಗೊಳಿಸಬಹುದು. ಭೂಮಿಯನ್ನು ರಾಷ್ಟ್ರೀಕರಣಗೊಳಸುವುದರಿಂದ ಭೂಮಾಲೀಕ ವರ್ಗವನ್ನು ನಿಷ್ಕ್ರಿಯಗೊಳಿಸಿ ಭೂರಹಿತ ದೀನದಲಿತರನ್ನು ಆರ್ಥಿಕವಾಗಿ ಸಬಲೀಕರಣಗೊಳಿಸಬಹುದೆಂದು ಅಂಬೇಡ್ಕರ್ ಪ್ರತಿಪಾದಿಸಿದರು. ಕೃಷಿಯನ್ನು ಒಂದು ಆರ್ಥಿಕ ಉದ್ಯಮವೆಂದು ಪರಿಗಣಿಸಿ ಕೃಷಿ ಸಹಕಾರಿ ಸಂಸ್ಥೆಗಳನ್ನು ಬೆಳೆಸುವುದರಿಂದ ಕೃಷಿಕರಿಗೆ ಕಡಿಮೆ ಬಡ್ಡಿದರದಲ್ಲಿ ಕೃಷಿ ಸಾಲವನ್ನು ನೀಡಿ ಮೇಲ್ವರ್ಗದ ಬಂಡವಾಳಶಾಹಿಯಿಂದ ದುರ್ಬಲರನ್ನು ವಿಮುಕ್ತಿಗೊಳಿಸಬೇಕೆಂದು ಅಂಬೇಡ್ಕರ್ ಅವರು ಆಶಿಸಿದ್ದರು. ಕಾರ್ಮಿಕ ಮಂತ್ರಿಗಳಾಗಿದ್ದಾಗ ಕೈಗಾರಿಕಾ ಕಾಯ್ದೆಗಳಿಗೆ ಕಾಯಕಲ್ಪ ಮಾಡಿ ದುಡಿಯುವ ವರ್ಗಕ್ಕೆ ನ್ಯಾಯೋಚಿತ ವೇತನ, ದುಡಿಮೆ ಅವಧಿ, ಜೀವ ವಿಮೆ, ಆರೋಗ್ಯ ವಿಮೆ, ಹೆಚ್ಚಿನ ಕೆಲಸಕ್ಕೆ ಹೆಚ್ಚಿನ ವೇತನ, ಮಹಿಳಾ ಕಾರ್ಮಿಕರಿಗೆ ಹೆರಿಗೆ ಭತ್ಯೆ ಮೊದಲಾದ ಹಲವಾರು ಸೌಲಭ್ಯಗಳನ್ನು ದೊರಕಿಸಿಕೊಟ್ಟು ತಮ್ಮ ಮಾನವೀಯತೆಯನ್ನು ಅಂಬೇಡ್ಕರ್ ಮೆರೆದರು. ಆಧುನಿಕ ಪಟಿತರ ವ್ಯವಸ್ಥೆಯನ್ನು ರೂಪಿಸಿ ಕೃಷಿಕರು ಮತ್ತು ಕಾರ್ಮಿಕರ ಹಿತವನ್ನು ಅಂಬೇಡ್ಕರ್ ಅವರು ರಕ್ಷಿಸಿದರು.

ಅಂಬೇಡ್ಕರ್ ಕಾನೂನು ಮಂತ್ರಿಗಳಾಗಿದ್ದ ಸಂದರ್ಭದಲ್ಲಿ ಭಾರತದ ದಲಿತರು ಮತ್ತು ಶೋಷಿತ ವರ್ಗಗಳು ದೇಶದ ಅರ್ಥವ್ಯವಸ್ಥೆಯ ಬೆನ್ನೆಲುಬಾಗಿ ರಾಷ್ಟ್ರದ ಅಭಿವೃದ್ಧಿಗೆ ನಿರ್ಣಾಯಕ ಕೊಡುಗೆ ನೀಡಿರುವುದರಿಂದ ಅವರಿಗೆ ನ್ಯಾಯೋಚಿತ ವೇತನ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಬೇಕೆಂದು ಭಾರತ ಸರ್ಕಾರಕ್ಕೆ ಕರೆಯಿತ್ತರು. ಭಾರತದಲ್ಲಿ ನೀರಾವರಿ ಮತ್ತು ವಿದ್ಯುತ್‌ಚ್ಛಕ್ತಿ ಸೌಲಭ್ಯಗಳನ್ನು ಎಲ್ಲೆಡೆ ವಿಸ್ತರಿಸುವುದರಿಂದ ದೇಶದ ರೈತರು ಮತ್ತು ಕಾರ್ಮಿಕರು ತಮ್ಮ ಜೀವನ ಮಟ್ಟವನ್ನು ಸುಧಾರಿಸಿಕೊಳ್ಳಬಹುದು. ಕೃಷಿ ಮತ್ತು ಕೈಗಾರಿಕೆ ಕ್ಷೇತ್ರಗಳನ್ನು ಸಮಾನ ಆದ್ಯತೆಯ ಮೇರೆಗೆ

ಭಾರತದಲ್ಲಿ ಅಭಿವೃದ್ಧಿಪಡಿಸುವುದರಿಂದ ಬಹುಜನರ ಅಭಿವೃದ್ಧಿಯ ಹಕ್ಕನ್ನು ಗೌರವಿಸದಂತಾಗುತ್ತದೆ. ಸಣ್ಣ ಹಿಡುವಳಿಗಳನ್ನು ಸಹಕಾರಿ ಕೃಷಿ ಪದ್ಧತಿಯಡಿ ಒಂದುಗೂಡಿಸಿ ಸಮಗ್ರ ಕೃಷಿ ಅಭಿವೃದ್ಧಿ ಸಾಧಿಸುವುದು ದೇಶದ ಪ್ರಗತಿಯ ಪೂರಕ.ಭಾರತೀಯ ಕೃಷಿಕರು ವೈಜ್ಞಾನಿಕ ಚಿಂತನೆ ಮತ್ತು ಪ್ರಯೋಗಗಳನ್ನು ಆಧರಿಸಿ ಕೃಷಿ ಕ್ಷೇತ್ರದ ಸಮರ್ಥ ನಿರ್ವಾಹಕರಾಗಿ ರೂಪುಗೊಳ್ಳಬೇಕು. ಗ್ರಾಮೀಣ ಪ್ರದೇಶಗಳಲ್ಲಿ ರೈತರು, ಗುಡಿಕಾರ್ಮಿಕರು ಮತ್ತಿತರ ಜನವರ್ಗಗಳಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸುವುದರಿಂದ ಅವರು ನಗರಕ್ಕೆ ವಲಸೆ ಬರುವುದು ತಪ್ಪುತ್ತದೆ.

ಭಾರತದ ಅರ್ಥವ್ಯವಸ್ಥೆಯ ಬೆನ್ನೆಲುಬಾಗಿರುವ ಕೃಷಿ ಕ್ಷೇತ್ರವನ್ನು ಸಮಗ್ರವಾಗಿ ಅಭಿವೃದ್ಧಿಪಡಿಸಿ ರೈತ ಕಾರ್ಮಿಕರ ದುಡಿಯುವ ಸಾಮಾರ್ಥ್ಯ ಸಂಪಾದಿಸುವ ಸಾಮಾರ್ಥ್ಯ ಮತ್ತು ನಿರ್ವಹಿಸುವ ಸಾಮಾರ್ಥ್ಯಗಳನ್ನು ವೃದ್ಧಿಸುವುದು ಭಾರತದಂಥ ಕೃಷಿ ಪ್ರಧಾನ ದೇಶದಲ್ಲಿ ಅನಿವಾರ್ಯ. ಕೃಷಿ ಕ್ಷೇತ್ರದ ಸಮಗ್ರ ಅಬಿವೃದ್ಧಿಯಿಂದಲೇ ಕೈಗಾರಿಕಾ ಕ್ಷೇತ್ರಕ್ಕೆ ಬಂಡವಾಳ ಮತ್ತು ಪ್ರೋತ್ಸಾಹಗಳು ಲಭಿಸುತ್ತದೆ.ಭಾರತವು ವಿಶ್ವದಲ್ಲಿ ಶ್ರೇಷ್ಟ ಆರ್ಥಿಕ ಶಕ್ತಿಯಾಗಿ ರೂಪುಗೊಳ್ಳುವಲ್ಲಿ ಕೈಗಾರಿಕಾ ಕ್ಷೇತ್ರದ ಅಭಿವೃದ್ಧಿಯನ್ನು ಕಡೆಗಣಿಸಲಾಗದು. ಕೈಗಾರಿಕಾ ಕ್ಷೇತ್ರದ ಅಭಿವೃದ್ಧಿಯಿಂದಾಗಿ ಸಾಮಾಜಿಕವಾಗಿ ಮತ್ತು ಗುಣಮಟ್ಟದ ಸರಕು ಸೇವೆಗಳು ಲಭಿಸುತ್ತದೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಉತ್ಪಾದನಾ ವ್ಯವಸ್ಥೆಯು ಖಾಸಗಿ ಮಾಲೀಕತ್ವಕ್ಕೆ ಒಳಪಡುವುದರಿಂದ ಮೇಲ್ವರ್ಗವು ದುರ್ಬಲ ವರ್ಗಗಳ ಮೇಲೆ ಕುದುರೆ ಸವಾರಿ ಮಾಡಲು ಸಾಧ್ಯವಾಗುತ್ತದೆ.ಬಡತನ, ಶೋಷಣೆ, ನಿರುದ್ಯೋಗ, ಅಸಮಾನತೆ ಮೊದಲಾದ ಸಮಸ್ಯೆಗಳು ಆರ್ಥಿಕ ವ್ಯವಸ್ಥೆ ಖಾಸಗೀಕರಣದ ನಿಚ್ಚಳ ಪರಿಣಾಮಗಳೆಂದು ಅಂಬೇಡ್ಕರ್ ಅವರು ಎಚ್ಚರಿಸಿದರು. ಸಮಾಜವಾದಿ ಆರ್ಥಿಕ ವ್ಯವಸ್ಥೆಯಿಂದ ಮಾತ್ರ ಸರ್ವ ಜನಾಂಗಗಳಿಗೂ ಆರ್ಥಿಕ ಸಂಪನ್ಮೂಲಗಳು ಮತ್ತು ಸದಾವಕಾಶಗಳು ಲಭಿಸುತ್ತದೆ. ಸಾಮಾಜಿಕ ಅಸಮಾನತೆಯೇ ಆರ್ಥಿಕ ಅಸಮಾನತೆಗೆ ಅನುವು ಮಾಡಿಕೊಡುತ್ತದೆ. ಭಾರತದ ಸಂಸದೀಯ ಪ್ರಜಾಪ್ರಭುತ್ವ ಮತ್ತು ಬಂಡವಾಳಶಾಹಿ ಆರ್ಥಿಕ ವ್ಯವಸ್ಥೆಗಳು ಬಹುಜನರ ಪ್ರಗತಿಗೆ ಮಾರಕ ಪ್ರಾಯವಾಗಿದೆ ಎಂದು ಅಂಬೇಡ್ಕರ್ ಅವರು ಸ್ಪಷ್ಟವಾಗಿ ವಾದಿಸಿದರು.

ರಾಜಕೀಯ ಕ್ಷೇತ್ರದಲ್ಲಿ ಒಬ್ಬ ವ್ಯಕ್ತಿ ಒಂದು ಮತ ಮತ್ತು ಒಂದು ಮೌಲ್ಯಗಳಿರುವಂತೆಯೇ ಆರ್ಥಿಕ ಕ್ಷೇತ್ರದಲ್ಲಿಯೂ ಕೂಡ ಸಮಾನ ಹಕ್ಕು, ಸಂಪನ್ಮೂಲ, ಅವಕಾಶ ಮತ್ತು ರಕ್ಷಣೆಗಳು ಸರ್ವರಿಗೂ ಲಭಿಸಿದಾಗ ಮಾತ್ರ ಭಾರತವು ಸುಖೀರಾಜ್ಯವಾಗಿ ರೂಪುಗೊಳ್ಳಬಹುದು. ಕೃಷಿ ಮತ್ತು ಕೈಗಾರಿಕಾ ಕ್ಷೇತ್ರಗಳಲ್ಲಿ ರಾಜ್ಯದ ಮಾಲೀಕತ್ವ ಹೆಚ್ಚಾದಷ್ಟು ಜನರ ಅಭಿವೃದ್ಧಿ ಅವಕಾಶಗಳು ಹೆಚ್ಚುತ್ತದೆ. ಬ್ಯಾಂಕು ಮತ್ತು ವಿಮಾ ಕ್ಷೇತ್ರಗಳನ್ನು ರಾಷ್ಟ್ರೀಕರಣಗೊಳಿಸುವುದರಿಂದ ಎಲ್ಲ ಜನಸಮುದಾಯಗಳಿಗೂ ಸುರಕ್ಷತೆ ಲಭಿಸುತ್ತದೆ. ಭಾರತದ ಜಾತಿ ವ್ಯವಸ್ಥೆ ಆರ್ಥಿಕ ಸಮಾನತೆ ಮತ್ತು ರಾಜಕೀಯ ಸಾರ್ವಭೌಮತ್ವಗಳಿಗೆ ತದ್ವಿರುದ್ದವಾಗಿರುವುದರಿಂದ ಶೋಷಿತ ಜನವರ್ಗಗಳು ಬಡತನದಲ್ಲಿಯೇ ಹುಟ್ಟಿ

ಬಡತನದಲ್ಲಿಯೇ ಸಾಯುವಂತಹ ದಯನೀಯ ಸ್ಥಿತಿ ಉಂಟಾಗಲು ಜಾತಿ ವ್ಯವಸ್ಥೆ ಕಾರಣವಾಗಿದೆ. ದಲಿತರು ಮತ್ತು ಶೋಷಿತರು ವೈದಿಕ ಧರ್ಮದಲ್ಲಿ ಮುಂದುವರೆಯುವುದರಿಂದ ವ್ಯವಸ್ಥೆಯ ಗುಲಾಮರಾಗಿಯೇ ಉಳಿಯಬೇಕಾಗುತ್ತದೆಂದು ಅಂಬೇಡ್ಕರ್ ಅವರು ಎಚ್ಚರಿಸಿದರು.

ಅಂಬೇಡ್ಕರ್ ಅವರು ದಲಿತರ ಉದ್ಧಾರ ದೇಶದ ಅಭ್ಯುದಯದ ಆಧಾರಸ್ತಂಭವೆಂದು ಪ್ರತಿಪಾದಿಸಿದರು.ಅಂಬೇಡ್ಕರ್ ವಾದವೆಂದರೆ; ಸಮಸ್ತ ಭಾರತೀಯರ ಸರ್ವತೋಮುಖ ಅಭಿವೃದ್ಧಿಗೆ ಪೂರಕವಾದ ವಿಚಾರಧಾರೆಯೇ ಆಗಿದೆ.ಬುದ್ಧನ ಮಧ್ಯಮ ಮಾರ್ಗವನ್ನು ಅನುಸರಿಸಿ ಸ್ವಾತಂತ್ರ್ಯನಂತರದಲ್ಲಿ ದಲಿತರ ಉದ್ಧಾರಕ್ಕೆ ಸಂವಿಧಾನತ್ಮಕವಾಗಿ ಭೂಮಿಕೆಯನ್ನು ಸಿದ್ಧಪಡಿಸಿದರು. ಭಾರತದ ರಾಜಕೀಯ ವ್ಯವಸ್ಥೆ ಎಲ್ಲಿಯ ತನಕ ಇಲ್ಲಿನ ಮೂಲಭೂತವಾದಿಗಳು ಮತ್ತು ಬಂಡವಾಳಶಾಹಿಗಳ ಕಪಿಮುಷ್ಠಿಗೆ ಒಳಪಟ್ಟಿರುವುದೋ ಅಲ್ಲಿಯ ತನಕ ದಲಿತೋದ್ಧಾರದ ಕನಸು ನನಸಾಗುವುದಿಲ್ಲ. ದಲಿತರು ಅಸ್ತಿತ್ವವನ್ನು ಉಳಿಸಬಲ್ಲದು.ದಲಿತರು ಭಾರತೀಯ ಸಮಾಜದಲ್ಲಿ ಅಸ್ತಿತ್ವದಲ್ಲಿರುವ ಜಾತಿ ಪ್ರಭುತ್ವಕ್ಕೆ ಎಲ್ಲ ನೆಲೆಗಳಿಂದ ಪ್ರತಿರೋಧವನ್ನು ಒಡ್ಡುವ ನಿಟ್ಟಿನಲ್ಲಿ ತಯಾರಾಗಬೇಕು. ಆ ಪ್ರಜ್ಞಾಪೂರ್ವಕ ಪ್ರತಿರೋಧ ಮಾತ್ರ ಒಳಗಿನ ಶತ್ರು ಮತ್ತು ಹೊರಗಿನ ಶತ್ರುಗಳ ವಿರುದ್ಧ ಪ್ರಜಾಸತ್ತಾತ್ಮಕ ಹೋರಾಟಕ್ಕಿಳಿಯುವುದು ಅನಿವಾರ್ಯವೆಂದು ಅಂಬೇಡ್ಕರ್ ಅವರು ಪ್ರತಿಪಾದಿಸಿದರು.

ಭಾರತದ ಮೂಲನಿವಾಸಿಗಳೇ ಆದ ದಲಿತರು ಎಲ್ಲರಂತೆಯೇ ಬದುಕುವ ಅವಕಾಶ ಮತ್ತು ಸಂಪನ್ಮೂಲಗಳನ್ನು ಗಳಿಸಿ ಗುಲಾಮಗಿರಿಯಿಂದ ವಿಮುಕ್ತರಾಗಬೇಕೆಂದು ಅಂಬೇಡ್ಕರ್ ಅವರು ನಂಬಿದ್ದರು.ಒಬ್ಬ ನಾಯಕ ಅಥವಾ ಒಂದು ರಾಜಕೀಯ ಪಕ್ಷದಿಂದ ದಲಿತರ ಉದ್ಧಾರ ಸಾಧ್ಯವಾಗುವುದಿಲ್ಲ. ದಲಿತರು ಸ್ವಾಭಿಮಾನ, ಸ್ವಾವಲಂಬನೆ, ಆತ್ಮಗೌರವ ಮತ್ತು ಆತ್ಮವಿಶ್ವಾಸಗಳನ್ನು ಗಳಿಸಿಕೊಂಡು ಶೋಷಣಾ ಪ್ರವೃತ್ತಿಗಳಿಂದ ಹೊರಬರುವುದು ಸ್ವಾತಂತ್ರ್ಯಾನಂತರ ಅನಿವಾರ್ಯ. ಅಂಬೇಡ್ಕರ್ 1942ರಲ್ಲಿ ಬಹಿಷ್ಕೃತ ಹಿತಕಾರಿಣಿ ಸಭಾ ಎಂಬ ಸಂಸ್ಥೆಯನ್ನು ಸ್ಥಾಪಿಸಿ ಅಸಮಾನತೆಯ ಆಗರವೇ ಆಗಿರುವ ಹಿಂದೂ ಧರ್ಮ ಗ್ರಂಥವಾದ ಮನುಸ್ಮೃತಿಯನ್ನು ಬಂಡಾಯದ ಸಂಕೇತವಾಗಿ 1927ನೇ ಡಿಸೆಂಬರ್ 25ರಂದು ಸುಟ್ಟರು.1928ರಲ್ಲಿ ಸೈಮನ್ ಕಮಿಷನ್ ಮುಂದೆ ಭಾರತದ ದಲಿತರಿಗೆ ಶಿಕ್ಷಣ ಮತ್ತು ಸೇವಾ ಕ್ಷೇತ್ರದಲ್ಲಿ ಅವಶ್ಯಕ ಮೀಸಲಾತಿ ಸೌಲಭ್ಯವನ್ನು ನೀಡಬೇಕೆಂದು ಅಂಬೇಡ್ಕರ್ ಮನವಿ ಮಾಡಿದರು. 1930-32 ಅವಧಿಯಲ್ಲಿ ದುಂಡುಮೇಜಿನ ಪರಿಷತ್ತಿನ ಸಭೆಗಳಲ್ಲಿ ಭಾಗವಹಿಸಿ ದಲಿತ ಸಮುದಾಯದ ಬದುಕುವ ಮೂಲಭೂತ ಹಕ್ಕನ್ನು ಪ್ರಬಲವಾಗಿ ಪ್ರತಿಪಾದಿಸಿದರು.

ಸಂಸತ್ತು ಮತ್ತು ಶಾಸನಸಭೆ ದಲಿತರ ಸಬಲೀಕರಣಕ್ಕೆ ಪೂರಕವಾದ ಶಾಸನಗಳನ್ನು ಸಮರ್ಥವಾಗಿ ರೂಪಿಸಲು ದಲಿತರಿಗೆ ಪ್ರತ್ಯೇಕ ಮತದಾನ ಪದ್ಧತಿಬೇಕೆಂದರು. ಅಂದಿನ ಬ್ರಿಟನ್ ಪ್ರಧಾನಿ ರಾಮಸ್ಯೆ ಮ್ಯಾಕ್‌ಡೊನಾಲ್ಡ್ ಅವರ ಮನವೊಲಿಸಿ ದಲಿತರಿಗೆ ಪ್ರತ್ಯೇಕ ಮತದಾನದ ಪದ್ಧತಿ

ಲಭಿಸುವಂತೆ ನೋಡಿಕೊಂಡರು. ಆದರೆ ಗಾಂಧಿ ಯರವಾಡ ಜೈಲಿನಲ್ಲಿ ಆಮರಣಾಂತ ಉಪವಾಸವನ್ನು ಕೈಗೊಂಡು ದಲಿತರಿಗೆ ಪ್ರತ್ಯೇಕ ಮತದಾನ ಪದ್ಧತಿ ಬೇಡವೆಂಬ 1932 ಸೆಪ್ಟೆಂಬರ್ 24ರಂದು ಪೂನಾ ಒಪ್ಪಂದಕ್ಕೆ ಅಂಬೇಡ್ಕರ್ ಒಲ್ಲದ ಮನಸ್ಸಿನಿಂದ ಸಹಿ ಹಾಕುವಂತೆ ನೋಡಿಕೊಂಡರು. ಈ ಒಪ್ಪಂದ ದಲಿತೋದ್ಧಾರಕ್ಕೆ ಸ್ವಾತಂತ್ರ್ಯನಂತರದಲ್ಲಿ ಒದಗಿದ ದೊಡ್ಡ ಹಿನ್ನೆಡೆಯಾಯಿತು. ಈ ಹಿನ್ನಡೆಯ ನಡುವೆಯೂ ಅಂಬೇಡ್ಕರ್ ಸಾಮಾಜಿಕ-ಆರ್ಥಿಕ ಕ್ಷೇತ್ರಗಳಲ್ಲಿ ದಲಿತರಿಗೆ ಸರಿಸಮಾನವಾದ ಅವಕಾಶಗಳು ಲಭಿಸುವ ನಿಟ್ಟಿನಲ್ಲಿ ಹಲವಾರು ಪ್ರಗತಿಪರ ಶಾಸನಗಳನ್ನುಳ್ಳ ಸಂವಿಧಾನವೊಂದನ್ನು ನೀಡುವಲ್ಲಿ ಯಶಸ್ವಿಯಾದರು. ದಲಿತೋದ್ಧಾರಕ್ಕೆ ಪೂರಕವಾದ ಸಂವಿಧಾನಾತ್ಮಕ ರಕ್ಷಣೆಗಳು ಮತ್ತು ಅವಕಾಶಗಳನ್ನು ಅಂಬೇಡ್ಕರ್ ಒದಗಿಸಿದರು.

ಸ್ವಾತಂತ್ರ್ಯಾನಂತರದಲ್ಲಿ ಭಾರತ ಸರ್ಕಾರ ಪಾಶ್ಚಿಮಾತ್ಯ ಬಂಡವಾಳಶಾಹಿ ಅಭಿವೃದ್ಧಿ ಮಾದರಿಯನ್ನು ಅನುಸರಿಸಿ ಕೃಷಿ ಮತ್ತು ಗುಡಿಕೈಗಾರಿಕೆಗಳನ್ನು ಕಡೆಗಣಿಸಿ ಕೈಗಾರಿಕಾಭಿವೃದ್ಧಿ ಮತ್ತು ನಗರಾಭಿವೃದ್ಧಿಗಳಿಗೆ ಹೆಚ್ಚಿನ ಪ್ರಾಮುಖ್ಯತೆ ನೀಡಿತ್ತು. ಬೃಹತ್ ಯೋಜನೆಗಳಿಂದ ಮಾತ್ರ ದೇಶದ ಅಭಿವೃದ್ಧಿ ಸಾಧ್ಯವೆಂದು ನಂಬಿದ ರಾಷ್ಟ್ರನಾಯಕರು ತೃಣಮೂಲ ಅಭಿವೃದ್ಧಿ ಮತ್ತು ತಳಸಮುದಾಯಗಳ ಅಭಿವೃದ್ಧಿಯನ್ನು ಕಡೆಗಣಿಸಿದರು. ಇಂತಹ ಪಾಶ್ಚಿಮಾತ್ಯ ಅಭಿವೃದ್ಧಿ ಮಾದರಿಯಿಂದಾಗಿ ಭಾರತದಲ್ಲಿ ವಿದ್ಯೆಯ ಮೇಲೆ ನಿಯಂತ್ರಣ ಹೊಂದಿದ ಬಂಡವಾಳಶಾಹಿ ವಿಜೃಂಭಿಸಲು ಸಾಧ್ಯವಾಯಿತು.ಗಾಂಧೀಜಿ ಸರ್ವೋದಯ ಮಾದರಿ ಮತ್ತು ಅಂಬೇಡ್ಕರ್ ಅಂತ್ಯೋದಯ ಮಾದರಿಯನ್ನು ಕಡೆಗಣಿಸಿ ದಲಿತರು, ಆದಿವಾಸಿಗಳು, ದುರ್ಬಲ ವರ್ಗಗಳು ಮತ್ತು ಅಲಕ್ಷಿತ ಸಮುದಾಯಗಳನ್ನು ರಾಷ್ಟ್ರೀಯ ಮುಖ್ಯವಾಹಿನಿಯಿಂದ ದೂರ ಸರಿಸಲಾಯಿತು.ವಸಾಹಾತುಶಾಹಿ ರಾಷ್ಟ್ರಗಳು ಮತ್ತು ಬಹುರಾಷ್ಟ್ರೀಯ ಕಂಪನಿಗಳು ರೂಪಿಸಿದ ಕುತಂತ್ರದಿಂದಾಗಿ ದಲಿತರು ಮತ್ತು ಶೋಷಿತ ವರ್ಗಗಳು ತಮ್ಮ ನೆಲೆ-ಬೆಲೆಗಳನ್ನು ಕಳೆದುಕೊಂಡವು.

ಭಾರತದ ಅರ್ಥವ್ಯವಸ್ಥೆ ದಲಿತರು ಮತ್ತಿತರ ಶೊಷಿತ ಜನವರ್ಗಗಳ ಬದುಕಿಗೆ ಸಂಬಂಧವನ್ನೇ ಹೊಂದಿಲ್ಲ. ದಲಿತರ ಪರಿಸ್ಥಿತಿ ಶೋಚನೀಯವಾಗಿದ್ದರೂ ಸಹ ಭಾರತವನ್ನು ಅಭಿವೃದ್ಧಿಶೀಲ ರಾಷ್ಟ್ರವೆಂದು ಪ್ರತಿಬಿಂಬಿಸುವುದು ಸಾಮ್ರಾಜ್ಯಶಾಹಿಗಳ ಹುನ್ನಾರವಾಗಿದೆ.ಭಾರತವು ಸರ್ವಸ್ವತಂತ್ರ ಗಣರಾಜ್ಯವಾಗಿ ರೂಪುಗೊಳ್ಳಬೇಕಾದರೆ ಸಾಮಾಜಿಕ-ಆರ್ಥಿಕ ವ್ಯವಸ್ಥೆಗಳ ಸಮಗ್ರ ಪುನಾರಚನೆ ಅನಿವಾರ್ಯ. ಭಾರತೀಯ ಸಮಾಜದಲ್ಲಿ ಸಮತೋಲನ ಇಲ್ಲವಾಗಿದೆ. ಮೇಲ್ವರ್ಗ ಮತ್ತು ಮೇಲ್ಜಾತಿಗಳನ್ನು ಪ್ರತಿನಿಧಿಸುವ ಕೆಲವೇ ಮಂದಿ ಬಹಳಷ್ಟು ಅಧಿಕಾರ ಮತ್ತು ಸಂಪನ್ಮೂಲಗಳನ್ನು ತಮ್ಮ ನಿಯಂತ್ರಣದಲ್ಲಿಟ್ಟುಕೊಂಡಿದ್ದಾರೆ. ಬಹುಸಂಖ್ಯಾತ ಬಹುಜನ ಸಮುದಾಯ ಹೊಂದಿರುವ ರಾಜಕೀಯ ಅಧಿಕಾರ ಮತ್ತು ಆರ್ಥಿಕ ಸಂಪನ್ಮೂಲಗಳು ಬಹಳ ಕಡಿಮೆಯೆಂದೇ ಹೇಳಬಹುದು. ಭಾರತೀಯ ಪ್ರಜಾಪ್ರಭುತ್ವ ವ್ಯವಸ್ಥೆ ಒಂದು ಸುಸಂಬದ್ದವಾದ ಆರ್ಥಿಕ ನೀತಿ ಹಾಗೂ ಸರ್ವಜನರ

ಅಭ್ಯುದಯಕ್ಕೆ ಪೂರಕವಾಗಿ ರೂಪುಗೊಂಡಾಗ ಮಾತ್ರ ದಲಿತೋದ್ಧಾರ ಮತ್ತು ಸುಖೀರಾಜ್ಯ ಪರಿಕಲ್ಪನೆಗಳು ಸಾಕಾರಗೊಳ್ಳುತ್ತದೆ. ಮುಕ್ತ ಮಾರುಕಟ್ಟೆ ವ್ಯವಸ್ಥೆಯಲ್ಲಿ ದಲಿತರು ಮತ್ತಿತರ ಶೋಷಿತ ವರ್ಗಗಳ ಮಾರಣಹೋಮವುಂಟಾಗುತ್ತದೆ. ಬ್ರಾಹ್ಮಣಶಾಹಿ ಮತ್ತು ಬಂಡವಾಳಶಾಹಿಗಳು ಸಾಮಾಜಿಕ ನ್ಯಾಯ ವಿತರಣಾ, ನ್ಯಾಯ ಮತ್ತು ಸರ್ವೋದಯದಂಥ ಪ್ರಕ್ರಿಯೆಗಳಿಗೆ ಭಾರತದಲ್ಲಿ ಅಡ್ಡಿಯುಂಟುಮಾಡಿದೆ.

ಸ್ವಾತಂತ್ರ್ಯಾನಂತರದಲ್ಲಿ ದಲಿತರನ್ನು ಅಭಿವೃದ್ಧಿಗಾಗಿ ಸಜ್ಜುಗೊಳಿಸುವುದು ಅತ್ಯಂತ ಅವಶ್ಯಕವೆಂದು ಅಂಬೇಡ್ಕರ್ ಭಾವಿಸಿದ್ದರು. ಬದುಕಿನ ಅವಕಾಶಗಳಿಂದ ತಮ್ಮದಲ್ಲದ ತಪ್ಪಿಗಾಗಿ ವಂಚಿತರಾದ ದಲಿತ ಸಮುದಾಯಕ್ಕೊಂದು ಅನನ್ಯತೆ ಇದೆ.ದಲಿತರು ದೇಶದ ಚರಿತ್ರೆಯಲ್ಲಿ ವಿಶೇಷ ಪಾತ್ರವನ್ನು ಹೊಂದಿದ್ದಾರೆ. ದಲಿತ ಸಮುದಾಯವನ್ನು ಪಟ್ಟಭದ್ರ ಹಿತಾಸಕ್ತಿಗಳು ಮತ್ತು ಶೋಷಣಾ ಪ್ರವೃತ್ತಿಗಳಿಂದ ವಿಮೋಚನೆಗೊಳಿಸುವ ಸಲುವಾಗಿ ಸಂವಿಧಾನಾತ್ಮಕ ರಕ್ಷಣೆಗಳು, ಸವಲತ್ತುಗಳು ಮತ್ತು ಅವಕಾಶಗಳನ್ನು ಅಂಬೇಡ್ಕರ್ ಕಲ್ಪಿಸಿಕೊಟ್ಟರು. ದಲಿತೋದ್ಧಾರ ಯೋಜನೆಗಳನ್ನು ದಲಿತರ ನಡುವೆಯೇ ರೂಪಿಸಬೇಕು ಮತ್ತು ದಲಿತ ಸಮುದಾಯಗಳಿಂದಲೇ ಅನುಷ್ಠಾನಗೊಳಿಸಬೇಕು. ದಲಿತರು ದೇಶದ ಅಭಿವೃದ್ಧಿ ಮತ್ತು ಪ್ರಕ್ರಿಯೆಗಳಲ್ಲಿ ನಿರ್ಣಾಯಕ ಪಾತ್ರವಹಿಸಿ ರಾಷ್ಟ್ರೀಯ ಮುಖ್ಯವಾಹಿನಿಗೆ ಬರಬೇಕು. ಇಂತಹ ಒಳಗೊಳ್ಳುವ ಅಭಿವೃದ್ಧಿ ಪರಿಕಲ್ಪನೆಯನ್ನು ಅಂಬೇಡ್ಕರ್ ನೀಡಿದರು.ಅವರು ನೀಡಿದ ಅಂತ್ಯೋದಯ ಅಭಿವೃದ್ಧಿ ಮಾದರಿ ಕಟ್ಟಕಡೆಯ ದಟ್ಟದಾರಿದ್ರ್ಯಕ್ಕೆ ಒಳಗಾದ ಸಮುದಾಯದ ಅಭಿವೃದ್ಧಿಯಿಂದಲೇ ದೇಶದ ಅಭಿವೃದ್ಧಿ ಸಾಧ್ಯವಾಗಬೇಕೆಂದು ಪ್ರತಿಪಾದಿಸುತ್ತದೆ. ಭಾರತೀಯ ಸಂದರ್ಭದಲ್ಲಿ ನಾಗರೀಕ ಸಮಾಜ–ದಲಿತ ಸಮಾಜಗಳ ನಡುವಿನ ಅಂತರವನ್ನು ಕಡಿಮೆ ಮಾಡುವಂತಹ ಒಳಗೊಳ್ಳುವ ಅಭಿವೃದ್ಧಿ ಪ್ರಕ್ರಿಯೆಗೆ ದಲಿತರನ್ನು ಗುರಿಪಡಿಸಬೇಕೆಂದು ಅಂಬೇಡ್ಕರ್‌ರವರ ದಲಿತೋದ್ಧಾರ ಆಶಯವಾಗಿತ್ತು.

ಅಭಿವೃದ್ಧಿ ಮೀಮಾಂಸೆಯಲ್ಲಿ ಅಧ್ಯಯನ ಮೂಲಮಾನ ವ್ಯಕ್ತಿಯೇ ವಿನಃ ಸಮುದಾಯವಲ್ಲವೆಂದು ಅಂಬೇಡ್ಕರ್ ಪ್ರತಿಪಾದಿಸಿದರು.ರಾಷ್ಟ್ರ ಪ್ರಭುತ್ವವು ದಲಿತರ ಸಬಲೀಕರಣಕ್ಕೆ ವಿಶೇಷ ಅವಕಾಶಗಳನ್ನು ಕಲ್ಪಿಸಿಕೊಡಬೇಕು. ದಲಿತೋದ್ಧಾರವೆಂಬ ಸೈದ್ಧಾಂತಿಕ ರಚನೆಯೊಂದು ಭಾರತದಲ್ಲಿ ರೂಪುಗೊಳ್ಳಬೇಕು. ಸ್ವಾತಂತ್ರ್ಯಪೂರ್ವ ಸ್ಥಿತಿಯಲ್ಲಿದ್ದ ದಲಿತರ ಕನಿಷ್ಟ ಅಭಿವೃದ್ಧಿ ಸಾಮಾರ್ಥ್ಯವನ್ನು ಚೌಕಟ್ಟಿನಲ್ಲಿ ಪರಿಭಾವಿಸಿಕೊಳ್ಳುವುದರ ಜೊತೆಗೆ ಅಂತ್ಯಜರ ಅಭಿವೃದ್ಧಿಗೆ ಅತಿ ಹೆಚ್ಚಿನ ರಾಜಕೀಯ ಅಧಿಕಾರ ಮತ್ತು ಆರ್ಥಿಕ ಸಂಪನ್ಮೂಲಗಳನ್ನು ಮಾನವೀಯ ನೆಲೆಗಟ್ಟಿನಲ್ಲಿ ಒದಗಿಸುವುದು ಅತ್ಯವಶ್ಯಕ.ದಲಿತರು ಮುಖ್ಯವಾಹಿನಿಯ ಜೊತೆ ಸಕ್ರಿಯವಾಗಿ ವ್ಯವಹರಿಸಿ ತಮ್ಮ ಆರ್ಥಿಕ ಚೌಕಾಸಿ ಶಕ್ತಿಯನ್ನು ಹೆಚ್ಚಿಸಿಕೊಳ್ಳದಿದ್ದರೆ ಮೇಲ್ವರ್ಗ ದಲಿತರನ್ನು ದಮನಿಸುವ ಕೆಲಸವನ್ನು ನಿರಂತರವಾಗಿ ಮುಂದುವರಿಸುತ್ತದೆ. ಮುಕ್ತ ಮಾರುಕಟ್ಟೆ ಕೇಂದ್ರಿತ ಅಭಿವೃದ್ಧಿ ಮಾದರಿಗೆ ಬದಲಾಗಿ ಸರ್ಕಾರಿ

ನಿಯಂತ್ರಣದ ಅಭಿವೃದ್ಧಿ ಮಾದರಿಯಿಂದ ದಲಿತರು ಮತ್ತಿತರ ಕೆಳವರ್ಗಗಳ ಆರ್ಥಿಕ ಸಬಲೀಕರಣ ಸಾಧ್ಯವಾಗುತ್ತದೆ.

ದಲಿತೋದ್ಧಾರದ ವ್ಯಾಪ್ತಿಯೊಳಗೆ ಭಾರತದ ಅಸ್ಪೃಶ್ಯ ಜನವರ್ಗಗಳು ಪ್ರಧಾನವಾಗಿ ಸೇರಬೇಕು ದಲಿತರನ್ನು ರಾಷ್ಟ್ರೀಯ ಮುಖ್ಯವಾಹಿನಿಯಿಂದ ಪ್ರತ್ಯೇಕಿಸುವ ಅಥವಾ ಸಮೀಕರಣಗೊಳಿಸುವ ಕೆಲಸವನ್ನು ಮುಂದುವರೆಸದೇ ಅಂತ್ಯೋದಯ ಅಭಿವೃದ್ಧಿ ಮಾದರಿಯನ್ನು ಅನುಸರಿಸಿ ದಲಿತೋದ್ಧಾರ ಕಾರ್ಯಕ್ರಮಗಳನ್ನು ರೂಪಿಸುವುದು ಸಮಂಜಸವಾಗಿದೆ. ಸ್ಥಾನೀಯವಾಗಿ ಆಲೋಚಿಸಿ ಜಾಗತಿಕವಾಗಿ ಉಳಿಯುವ ವಿಕೇಂದ್ರಿತ ಹಾಗೂ ಒಳಗೊಳ್ಳುವ ಅಭಿವೃದ್ಧಿ ವ್ಯವಸ್ಥೆಗಳನ್ನು ರೂಪಿಸುವುದರಿಂದ ದಲಿತ ಸಮುದಾಯಕ್ಕೆ ಆರ್ಥಿಕ ಅವಕಾಶ, ಸಂಪನ್ಮೂಲ ಮತ್ತು ಸ್ವಾಯತ್ತತೆಗಳು ಲಭಿಸುತ್ತದೆ.ಉತ್ಪಾದನೆಯ ಪ್ರತಿ ಹಂತದಲ್ಲಿಯೂ ಮಾನವೀಯತೆಯನ್ನು ಆಧರಿಸಿದ ಅಭಿವೃದ್ಧಿ ನೀತಿಯನ್ನು ಅನುಸರಿಸುವುದರಿಂದ ದಲಿತರು ಮತ್ತಿತರ ಶೋಷಿತ ಸಮುದಾಯಗಳ ಸಬಲೀಕರಣ ಸಾಧ್ಯವಾಗುತ್ತದೆ.ಬುದ್ಧನ ಅಭಿವೃದ್ಧಿ ಮಾದರಿಯನ್ನು ಅನುಸರಿಸಿ ಪ್ರಬಲ ಆರ್ಥಿಕ ಶಕ್ತಿಯಾಗಿ ರೂಪುಗೊಂಡಿರುವ ಚೀನಾ ದೇಶವನ್ನು ಭಾರತ ಅನುಸರಿಸುವುದು ಅಗತ್ಯವೆಂದು ಅಂಬೇಡ್ಕರ್ ಅವರು ಸೂಚಿಸಿದ್ದಾರೆ.

ಶಕ್ತಿ ರಾಜಕಾರಣ ಕೇಂದ್ರಿತ ಅಭಿವೃದ್ಧಿಯನ್ನು ನಿರಾಕರಿಸಿ ರಾಜ್ಯಶಕ್ತಿ ಮತ್ತು ಜನಶಕ್ತಿಗಳ ಸಂಯೋಗವನ್ನು ಆಧರಿಸಿದ ಹೊಸ ಅಭಿವೃದ್ಧಿ ಮತ್ತು ಪ್ರಕ್ರಿಯೆಗಳು ದಲಿತೋದ್ದಾರಕ್ಕೆ ಪೂರಕವಾಗಿವೆ. ಭಾರತೀಯ ಸಂದರ್ಭದಲ್ಲಿ ತಳಸಮುದಾಯಗಳ ಅಭಿವೃದ್ಧಿ ಮೀಮಾಂಸೆ ವಿಶೇಷ ಮಹತ್ವ ಹೊಂದಿವೆ. ದಲಿತ ಸಮುದಾಯವು ಭಾರತೀಯ ಅರ್ಥವ್ಯವಸ್ಥೆಯ ಬುನಾದಿಯಾಗಿದೆ. ದುಡಿಯುವ ಬೃಹತ್ ಶೋಷಿತ ಸಮುದಾಯವನ್ನು ವಿನಾಶದೆಡೆಗೆ ದೂಡಿ ಆಳುವ ವರ್ಗ ಕೇಂದ್ರಿತ ಅಭಿವೃದ್ಧಿ ವ್ಯವಸ್ಥೆಯ ಸಾಮಾಜಿಕ ನ್ಯಾಯಕ್ಕೆ ಕೊಡಲಿಪೆಟ್ಟು ನೀಡುತ್ತದೆಂದು ಅಂಬೇಡ್ಕರ್ ಎಚ್ಚರಿಸಿದ್ದಾರೆ. ರಾಷ್ಟ್ರೀಯ ಅಭಿವೃದ್ಧಿಯ ಹೆಸರಿನಲ್ಲಿ ದಲಿತರು ಮತ್ತು ಶೋಷಿತ ವರ್ಗಗಳ ಹಿತವನ್ನು ತ್ಯಾಗ ಮಾಡುವುದು ಸಲ್ಲದು. ವಾಸ್ತವವಾಗಿ ತೃಣಮೂಲ ಅಭಿವೃದ್ಧಿ ಪರಿಕಲ್ಪನೆ ಮತ್ತು ಅಂತ್ಯೋದಯ ಅಭಿವೃದ್ಧಿ ಪರಿಕಲ್ಪನೆಗಳನ್ನು ಸಾಕಾರಗೊಳಿಸುವುದರಿಂದ ಭಾರತದಂತಹ ಅಭಿವೃದ್ಧಿಶೀಲ ದೇಶದಲ್ಲಿ ಸಮತೋಲನ ಹೊಂದಿದ ಅರ್ಥವ್ಯವಸ್ಥೆಯನ್ನು ಬೆಳೆಸುವುದು ಸೂಕ್ತವಾಗಿದೆ.ದಲಿತ ಸಮುದಾಯದ ಅಭಿವೃದ್ಧಿಯನ್ನು ಆರ್ಥಿಕತೆ ಒಂದು ಅಂಶವಾಗಬೇಕೇ ಹೊರತು ಆರ್ಥಿಕತೆಯೆ ಅಭಿವೃದ್ಧಿಯಾಗಬಾರದೆಂದು ಅಂಬೇಡ್ಕರ್‌ವಾದ 21ನೇ ಶತಮಾನದಲ್ಲಿ ಪ್ರಸ್ತುತವಾಗಿದೆ.

**ದಲಿತ ಚಳವಳಿ ಮತ್ತು ದಲಿತರ ಆರ್ಥಿಕ ಸಬಲೀಕರಣ**

ಭಾರತದ ದಲಿತ ಚಳವಳಿಯ ಸಂಘಟಕರು ಪ್ರಧಾನವಾಗಿ ದಲಿತರ ಸಾಮಾಜಿಕ ಮತ್ತು ಆರ್ಥಿಕ ಸ್ಥಾನಮಾನಗಳನ್ನು ಸುಧಾರಿಸಬೇಕೆಂಬ ಹಂಬಲದಿಂದ ಹೋರಾಟ ನಡೆಸಿದ್ದಾರೆ.ದಲಿತ ಚಳವಳಿ

ಸಾಮಾಜಿಕ–ಆರ್ಥಿಕ ತಾರತಮ್ಯಗಳನ್ನು ನಿವಾರಿಸಬೇಕೆಂಬ ಅಂಬೇಡ್ಕರ್‌ವಾದವನ್ನು ಪ್ರಧಾನವಾಗಿ ಅವಲಂಬಿಸಿದೆ. ಭಾರತದಲ್ಲಿ ಹಲವಾರು ತಲೆಮಾರುಗಳು ದಲಿತರ ಸಬಲೀಕರಣವನ್ನು ಪ್ರಧಾನವಾಗಿ ಆಧರಿಸಿದ ಹೋರಾಟವನ್ನು ವಿವಿಧ ಕಾಲಗಟ್ಟಗಳಲ್ಲಿ ನಡೆಸಿರುವುದನ್ನು ಇತಿಹಾಸಕಾರರು ದಾಖಲಿಸಿದ್ದಾರೆ. ದಲಿತರು ವಿದ್ಯೆ, ಉದ್ಯೋಗ, ಆಸ್ತಿ ಮತ್ತು ಅವಕಾಶಗಳಿಂದ ವಂಚಿತರಾಗಿರಲು ಈ ದೇಶದ ಜಾತಿ ವ್ಯವಸ್ಥೆ ಪ್ರಮುಖ ಕಾರಣವಾಗಿದೆ. ದಲಿತರು ಆರ್ಥಿಕವಾಗಿ ಇತರ ಜನಾಂಗಗಳಿಗಿಂತ ಹೆಚ್ಚು ಅವಕಾಶ ವಂಚಿತರಾಗಿರುವುದರಿಂದ ಶೋಷಣೆಗೆ ಹೆಚ್ಚಿನ ಪ್ರಮಾಣದಲ್ಲಿ ಗುರಿಯಾಗಿದ್ದಾರೆ. ಪ್ರಪಂಚದ ಯಾವುದೇ ದೇಶದಲ್ಲಿ ಶ್ರಮ ವಿಭಜನೆ ಆಧಾರದ ಮೇಲೆ ಜಾತಿ ಪದ್ಧತಿ ರೂಪುಗೊಂಡಿಲ್ಲ. ಆದರೆ ಭಾರತದ ಜಾತಿಪದ್ಧತಿ ವೈಜ್ಞಾನಿಕ ಮತ್ತು ಮಾನವೀಯ ತಳಹದಿಗಳನ್ನು ಹೊಂದಿಲ್ಲದ ಕಾರಣ ಸಮಾಜದ ಅಂತ್ಯಜರು ಅಥವಾ ದಲಿತರು ಆರ್ಥಿಕವಾಗಿ ಹಿಂದುಳಿದಿದ್ದಾರೆ.ದಲಿತರ ಆರ್ಥಿಕ ಪರಿಸ್ಥಿತಿ ಜಾತಿಪದ್ಧತಿಯಿಂದಾಗಿ ಅಪಾಯಕಾರಿಯಾಗಿ ಬೆಳೆದಿರುವುದನ್ನು ಅಂಬೇಡ್ಕರ್ ವಿಚಾರಧಾರೆಯು ಸ್ಪಷ್ಟವಾಗಿ ತಿಳಿಸುತ್ತದೆ.

ದಲಿತ ಚಳವಳಿಯ ಸಂಘಟಕರು ಸಂಪತ್ತಿನ ಪುನರ್ ಹಂಚಿಕೆಯಿಂದ ದಲಿತರು ಆರ್ಥಿಕವಾಗಿ ಸಬಲೀಕರಣಹೊಂದಲು ಸಾಧ್ಯವೆಂದು ಪ್ರತಿಪಾದಿಸಿದ್ದಾರೆ. ಒಂದು ವೇಳೆ ಸಂಪತ್ತಿನ ಪುನರ್ ಹಂಚಿಕೆ ಪ್ರಾಯೋಗಿಕವಾಗಿ ಕಷ್ಟಕರವಾದರೆ ಉತ್ಪಾದನೆ ವ್ಯವಸ್ಥೆ ಮತ್ತು ಆರ್ಥಿಕ ಸಂಪನ್ಮೂಲಗಳು ಪ್ರಭುತ್ವದ ನಿಯಂತ್ರಣಕ್ಕೆ ಒಳಪಡುವುದು ಸೂಕ್ತವೆಂಬ ವಾದವನ್ನು ದಲಿತ ಚಳವಳಿ ಮುಂದಿಟ್ಟಿದೆ.ಅಂಬೇಡ್ಕರ್ ಅವರು ಪ್ರತಿಪಾದಿಸಿದಂತೆ ದಲಿತರ ಮತ್ತಿತರ ಸಮಸ್ತ ಶೋಷಿತ ವರ್ಗಗಳ ಆರ್ಥಿಕ ಸ್ಥಾನಮಾನವನ್ನು ಮೇಲೆತ್ತಬೇಕೇ ಹೊರತೂ ವ್ಯಕ್ತಿಗತ ಸ್ಥಾನಮಾನವನ್ನಲ್ಲ ಎಂಬ ಅಂಶವನ್ನು ದಲಿತ ಚಳವಳಿ ಮನಗಂಡಿದೆ.ಶಿಕ್ಷಣ, ತರಬೇತಿ, ಉದ್ಯಮಶೀಲತೆಯ ಅಭಿವೃದ್ಧಿ, ವ್ಯಕ್ತಿತ್ವ ವಿಕಾಸ, ನಾಯಕತ್ವ ಅಭಿವೃದ್ಧಿ, ಸಂಪತ್ತಿನ ವಿಕೇಂದ್ರಿಕರಣದಂತ ಸಾಧನೆಗಳ ಮೂಲಕ ದಲಿತರ ಆರ್ಥಿಕ ಸ್ಥಿತಿಗತಿಗಳನ್ನು ಸುಧಾರಿಸಬೇಕೆಂದು ಸಂಘಟಕರು ನೀತಿನಿರೂಪಕರಿಗೆ ಒತ್ತಾಯಪೂರ್ವಕವಾಗಿ ಆಗ್ರಹಿಸಿದ್ದಾರೆ.ಭೂ ಸುಧಾರಣೆ ಕಾನೂನನ್ನು ಕರ್ನಾಟಕವನ್ನು ಒಳಗೊಂಡಂತೆ ಎಲ್ಲ ರಾಜ್ಯಗಳಲ್ಲಿಯೂ ಸಮರ್ಪಕವಾಗಿ ಜಾರಿಗೊಳಸಬೇಕೆಂದು ದಲಿತ ಚಳವಳಿ ಒತ್ತಾಯಿಸಿದೆ.

ದಲಿತ ಚಳವಳಿ ದಲಿತರ ಸಬಲೀಕರಣಕ್ಕೆ ಪೂರಕವಾದ ಮೂಲಭೂತ ಸೌಕರ್ಯಗಳನ್ನು ನಗರ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ದಲಿತ ಸಮುದಾಯಕ್ಕೆ ಒದಗಿಸಬೇಕೆಂದು ಆಗ್ರಹಿಸಿದೆ. ಸಾರ್ವಜನಿಕ ವಲಯವನ್ನು ಸಮಗ್ರವಾಗಿ ಅಭಿವೃದ್ಧಿಗೊಳಿಸಿ ಅಲ್ಲಿ ದಲಿತರಿಗೆ ಮೀಸಲಾತಿ ಸೌಲಭ್ಯವನ್ನು ಕಲ್ಪಿಸಿ ದಲಿತ ಜೀವನಮಟ್ಟವನ್ನು ಸುಧಾರಿಸಬೇಕೆಂದು ದಲಿತ ಚಿಂತಕರು ಆಗ್ರಹಿಸಿದ್ದಾರೆ.ಭಾರತದ ಅರ್ಥವ್ಯವಸ್ಥೆಯನ್ನು ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವ ಮತ್ತು ಸರ್ವೋದಯ ಮೌಲ್ಯಗಳನ್ನು ಆಧರಿಸಿ ಪುನರ್ ರಚಿಸಬೇಕೆಂಬ ಹೋರಾಟವನ್ನು ದಲಿತ ಚಳವಳಿ ಕೈಗೆತ್ತಿಗೊಂಡಿದೆ. ಬಹಳಷ್ಟು ದಲಿತ

ಬುದ್ಧಿಜೀವಿಗಳು, ಚಿಂತಕರು, ಸಾಹಿತಿಗಳು ದಲಿತರ ಜೀವನಾವಕಾಶ ವಿಸ್ತರಣೆ ಮತ್ತು ಸಬಲೀಕರಣ ಅವಶ್ಯಕತೆಗಳನ್ನು ಪ್ರಧಾನವಾಗಿ ಪ್ರತಿಪಾದಿಸಿದ್ದಾರೆ.ದಲಿತರು ರಾಜಕೀಯ ಅಧಿಕಾರವನ್ನು ಗಳಿಸಿದಾಗ ಆರ್ಥಿಕ ಅಭಿವೃದ್ಧಿಯೆಡೆಗೆ ಸಾಗುವುದು ಸಾಧ್ಯವಾಗುತ್ತದೆಂಬ ವಿಚಾರವನ್ನು ದಲಿತ ಚಿಂತಕರು ಮಂಡಿಸಿದ್ದಾರೆ. ದಲಿತರ ಕೈಯಲ್ಲಿ ಧರ್ಮಗ್ರಂಥಗಳನ್ನು ಕೊಡುವದರ ಬದಲು ದಲಿತರಿಗೆ ಭೂಮಿಯನ್ನು ಕೊಡಿರೆಂಬಪ್ರಬಲ ವಾದವನ್ನು ದಲಿತ ಚಳವಳಿ ಎತ್ತಿಹಿಡಿದಿದೆ. ವೈದಿಕಶಾಹಿ ಮತ್ತು ಬಂಡವಾಳಶಾಹಿಗಳನ್ನು ಪ್ರಜಾಸತ್ತಾತ್ಮಕ ವಿಧಾನಗಳಿಂದ ಮಣಿಸಿ ದಲಿತರ ಬದುಕುವ ಹಕ್ಕನ್ನು ಗೌರವಿಸಬೇಕೆಂಬ ವಾಸ್ತವವನ್ನು ದಲಿತ-ಬಂಡಾಯ ಸಾಹಿತ್ಯ ಪರಿಣಾಮಕಾರಿಯಾಗಿ ಅಭಿವ್ಯಕ್ತಗೊಳಿಸಿದೆ.ಮಾನವ ಘನತೆ ಮತ್ತು ಅಭಿವೃದ್ಧಿಗಳಿಗೆ ಬಹುದೊಡ್ಡ ಅಡ್ಡಗಲ್ಲುಗಳಾಗಿರುವ ಅಸ್ಪೃಶ್ಯತೆ ಮತ್ತು ಜಾತಿಪದ್ದತಿಗಳನ್ನು ನಿವಾರಿಸಿದಾಗ ಮಾತ್ರ ದಲಿತೋದ್ದಾರ ಸಾಧ್ಯವೆಂಬ ಸತ್ಯವನ್ನು ದಲಿತ ಚಳವಳಿ ಪ್ರತಿಪಾದಿಸಿದೆ.

ದಲಿತ ಚಳವಳಿಯಲ್ಲಿ ಸಾಹಿತಿಗಳು, ಸಂಘಟಕರು, ಹೋರಾಟಗಾರರು, ಮಹಿಳೆಯರು ಮತ್ತು ಯುವಜನರು ಸಕ್ರಿಯವಾಗಿ ಪಾಲ್ಗೊಂಡಿದ್ದಾರೆ. ಕರ್ನಾಟಕದ ಭವಿಷ್ಯವನ್ನು ದಲಿತರು, ಹಿಂದುಳಿದವರು, ಅಲ್ಪಸಂಖ್ಯಾತರು ಮತ್ತು ಮಹಿಳೆಯರ ಮೂಲಕ ಕಟ್ಟುವ ಹೊಸ ಆಂದೋಲನಕ್ಕೆ ದಲಿತ ಚಳವಳಿ ನಾಂದಿ ಹಾಡಿದೆ.ಸ್ವಾತಂತ್ರ್ಯ ಬಂದು ಸುಮಾರು 75 ವರ್ಷಗಳು ಸಂದಿದ್ದರು ಸಹ ದಲಿತರ ಆರ್ಥಿಕ ಸಮಸ್ಯೆಗಳ ಭೀಕರವಾಗಿಯೆ ಕಾಣಿಸುತ್ತದೆ.ಬಹುಸಂಖ್ಯಾತ ದಲಿತರು ಮೂಲಭೂತ ಸೌಕರ್ಯಗಳಿಂದ ವಂಚಿತರಾಗಿ ಸಾವು ಬದುಕಿನ ನಡುವೆ ಹೋರಾಟ ನಡೆಸುತ್ತಿರುವ ಪರಿಯನ್ನು ದಲಿತ ಚಳವಳಿ ಪರಿಣಾಮಕಾರಿಯಾಗಿ ಅಭಿವ್ಯಕ್ತಿಗೊಳಿಸಿದೆ.ತುಳಿತಕ್ಕೊಳಗಾದ ಎಲ್ಲರೂ ಸಂಘಟಿತರಾಗಿ ಪ್ರಜಾಪ್ರಭುತ್ವದ ಸಂವಿಧಾನಿಕ ನೆಲೆಯಲ್ಲಿ ಆರ್ಥಿಕ ಸಮಾನತೆಯನ್ನು ಪಡೆಯಬೇಕೆಂಬ ಅರಿವನ್ನು ದಲಿತ ಚಳವಳಿ ಮೂಡಿಸಿವೆ.

ದಲಿತ ಚಳವಳಿಯ ಪ್ರಧಾನ ಆಶಯ ಎಲ್ಲ ಕೆಳಸ್ತರದ ಸಮುದಾಯಗಳ ವಿಮುಕ್ತಿ ಮತ್ತು ಸಬಲೀಕರಣವೇ ಆಗಿದೆ. ದಲಿತ ಚಳವಳಿಯ ಸಂಘಟಕರು ದಲಿತ ಸಮುದಾಯಕ್ಕೆ ಪರ್ಯಾಯ ಸಂಸ್ಕೃತಿ, ರಾಜಕಾರಣ, ಸಾಹಿತ್ಯ, ಅರ್ಥವ್ಯವಸ್ಥೆಗಳು ಬೇಕೆಂದು ಆಗ್ರಹಿಸಿದ್ದಾರೆ. ಪ್ರಭುತ್ವದ ಜೊತೆಗಿನ ಊಳಿಗಮಾನ್ಯ ಅಧಿಕಾರ ಮತ್ತು ಆರ್ಥಿಕ ಯಜಮಾನ್ಯಗಳನ್ನು ದಲಿತ ಚಳವಳಿ ಪ್ರಬಲವಾಗಿ ವಿರೋಧಿಸಿದೆ.ದಲಿತ ಸಮುದಾಯಗಳೆಲ್ಲ ಒಗ್ಗೂಡಿ ದಲಿತರ ಸಮಗ್ರ ಅಭಿವೃದ್ಧಿಗೆ ಪೂರಕವಾದ ಆರ್ಥಿಕ ರಾಜಕಾರಣವನ್ನು ರೂಪಿಸಿಕೊಳ್ಳಬೇಕೆಂದು ಸಂಘಟಕರು ಕರೆ ನೀಡಿದ್ದಾರೆ.

ಚಿಂತಕರಾದ ಮೊಗಳ್ಳಿ ಗಣೇಶ್ (2005;04) ಅವರು ಅಭಿವೃದ್ಧಿನಿಷ್ಟ ರಾಜಕಾರಣವನ್ನು ಕುರಿತು ಹೀಗೆ ಚಿಂತಿಸಿದ್ದಾರೆ. "ಅಭಿವೃದ್ಧಿಯ ಆರ್ಥಿಕ ಮಾನದಂಡಗಳಿಗೂ ಸಾಮಾಜಿಕ ನ್ಯಾಯದ ರಾಜಕೀಯ ಮೌಲ್ಯಗಳಿಗೂ ಪೂರಕವಾದ ಸಂಬಂಧಗಳನ್ನು ಉತ್ಪಾದನೆ ವಿತರಣೆ ಮತ್ತು ಪ್ರತಿಫಲದಲ್ಲಿ

ಏರ್ಪಡಿಸಬೇಕು.ಈ ತನಕ ಅಖಂಡ ದಲಿತ ಸಮುದಾಯಗಳೆಲ್ಲವೂ ಬೇರೆಯವರ ಅಭಿವೃದ್ಧಿಗಾಗಿ ಮೀಸಲಿಟ್ಟ ಸಮುದಾಯಗಳಾಗಿ ಮಾತ್ರ ಸಾಗಿಬಂದಿದೆ.ದಲಿತಲೋಕ ಕೇವಲ ಅನುಭೋಗಿಯದಲ್ಲ. ಅಭಿವೃದ್ಧಿಯೆಂಬ ವ್ಯವಸಾಯವನ್ನು ನಿರ್ವಹಿಸುವ ಈ ಸಮುದಾಯಗಳಿಗೆ ತಕ್ಕುದಾದ ಉದ್ಯೋಗ ಮತ್ತು ಆರ್ಥಿಕ ಸ್ವಾಯತ್ತೆಯನ್ನು ಒದಗಿಸಿವ ವ್ಯವಸ್ಥೆಯಾಗಬೇಕು. ಈವರಗಿನ ನಮ್ಮ ಎಲ್ಲ ಪ್ರಗತಿ ಹಾಗೂ ಅಭಿವೃದ್ಧಿಯ ರಾಜನೀತಿಗಳು ಮಾರುಕಟ್ಟೆಯನ್ನು ಬಂಡವಾಳಶಾಹಿ ಸಾಮ್ರಾಜ್ಯಶಾಹಿ ಶಕ್ತಿಗಳನ್ನು ಕಾಯುತ್ತ ಬಂದವೇ ಆಗಿದ್ದು, ಜನಸಾಮಾನ್ಯರಿಗಾಗಿ ಅಭಿವೃದ್ಧಿಯ ಕಲ್ಪಿತ ಹೆಮ್ಮೆಯೆಲ್ಲೇ ಮೆರೆಯುವ ಭಾರತದ ಅರ್ಥವ್ಯವಸ್ಥೆಯು ಹೀಗೆ ಮುಂದುವರಿದರೆ ಇಲ್ಲಿನ ಅಂಚಿನವರ ಭವಿಷ್ಯವು ಮುಂದೆ ಘೋರವಾಗಿರುತ್ತದೆ”.

ದಲಿತರಿಗೆ ಸರ್ಕಾರದಿಂದ ಲಭಿಸುವ ಯೋಜನೆಗಳ ಬಗ್ಗೆ ದಲಿತರಲ್ಲಿ ಅರಿವು ಮೂಡಿಸಿ ಅಭಿವೃದ್ಧಿ ಯೋಜನೆಗಳನ್ನು ದಲಿತರ ಮನೆಬಾಗಿಲಿಗೆ ಕೊಂಡ್ಯೊಯ್ಯುವ ಕೆಲಸವನ್ನುಚಳವಳಿಗಾರರು ನಿರ್ವಹಿಸಿದರು. ದಲಿತ ಚಿಂತಕರು ಭೂಮಿ ದಲಿತರು ಮತ್ತು ಇತರ ದುರ್ಬಲ ವರ್ಗಗಳಿಗೆ ಕೇವಲ ಆದಾಯ ಮೂಲವಾಗಿಯೇ ಅಷ್ಟೆ ಉಳಿಯದೇ ಉದ್ಯೋಗದ ಮೂಲವಾಗಿದೆ ಎಂದು ಪ್ರತಿಪಾದಿಸಿದರು. ಕೃಷಿಯನ್ನು ಅನುತ್ಪಾದಕ ಕ್ಷೇತ್ರವೆಂದು ಪರಿಗಣಿಸದೇ ದೇಶದ ಅಭಿವೃದ್ಧಿಯ ಬೆನ್ನೆಲುಬೆಂದು ಪರಿಗಣಿಸಬೇಕೆಂದು ದಲಿತ ಚಿಂತಕರು ಮತ್ತು ರೈತ ನಾಯಕರು ವಾದಿಸಿದ್ದಾರೆ.ದಲಿತರು, ರೈತರು ಮತ್ತು ನೀರ್ಗ್ರೋಗಳು ಅತ್ಯಂತ ಕೆಟ್ಟದಾಗಿ ಕಡೆಗಣಿಸಲ್ಪಟ್ಟ ವರ್ಗಗಳಿವೆ. ದಲಿತ ಚಳವಳಿ ಮುಖ್ಯವಾಗಿ ದಲಿತರ ಭೂಮಿಯ ಪ್ರಶ್ನೆಯನ್ನು ಕೈಗೆತ್ತಿಗೊಂಡಿತು.

ದಲಿತ ಚಳವಳಿ ಊಳಿಗಮಾನ್ಯ ಪದ್ಧತಿ ಮತ್ತು ಬಂಡವಾಳಶಾಹಿ ಪದ್ಧತಿಗಳನ್ನು ಉಗ್ರವಾಗಿ ಖಂಡಿಸಿ ನಾಡಿನ ವಿವಿದೆಡೆ ಭೂ ಚಳವಳಿಗಳನ್ನು ಸಂಘಟಿಸಲು ಪ್ರೇರಣೆ ನೀಡಿತು. ಬಹುಮುಖ್ಯವಾಗಿ ಸಣ್ಣ ಹಿಡುವಳಿಗಾರರು ಮತ್ತು ಕೃಷಿ ಕಾರ್ಮಿಕರ ಬದುಕನ್ನು ಸುಧಾರಿಸಿವ ಅಗತ್ಯತೆಯನ್ನು ದಲಿತ ಚಳವಳಿ ಎತ್ತಿಹಿಡಿಯಿತು.ರಾಜ್ಯ ಸರ್ಕಾರ ಭೂಮಿಯನ್ನು ಕೊಂಡು ದಲಿತರಿಗೆ ಹಂಚುವ ಸರ್ಕಾರಿ ಯೋಜನೆ ಜಾರಿಗೆ ಬರುವಲ್ಲಿ ಚಳವಳಿಗಾರರು ಮಹತ್ವದ ಪಾತ್ರವನ್ನು ವಹಿಸಿದ್ದಾರೆ. ರಾಜ್ಯ ಆಯಾವ್ಯಯ ಮಂಡನೆಯ ಸಂದರ್ಭದಲ್ಲಿ ದಲಿತರ ಅಭಿವೃದ್ಧಿಗಾಗಿ ಪ್ರತ್ಯಕ ಹಣವನ್ನು ತೆಗೆದಿರಿಸಬೇಕೆಂಬ ಬೇಡಿಕೆಯನ್ನು ಚಳವಳಿಗಾರರು ಸರ್ಕಾರದ ಮುಂದಿಟ್ಟಿದ್ದಾರೆ. ಬಡ ದಲಿತರನ್ನು ಖಾಸಗಿ ಸಾಲದಿಂದ ಮುಕ್ತಗೊಳಿಸಲು ಡಿ.ಐ.ಆರ್ ಯೋಜನೆಯನ್ನು ಜಾರಿಗೊಳಿಸಿ ಕಡಿಮೆ ಬಡ್ಡಿದರದಲ್ಲಿ ಬ್ಯಾಂಕುಗಳ ಸಾಲ ಕೊಡುವ ವ್ಯವಸ್ಥೆ ರೂಪುಗೊಳ್ಳಲು ದಲಿತ ಚಳವಳಿ ಪ್ರಮುಖ ಕಾರಣವಾಗಿದೆ.

ಜಾಗತೀಕರಣ ಯುಗದಲ್ಲಿ ವಿಶೇಷ ಆರ್ಥಿಕ ವಲಯದ ಹೆಸರಿನಲ್ಲಿ ದಲಿತರು ಮತ್ತು ಹಿಂದುಳಿದ ವರ್ಗಗಳ ಜನರ ಭೂಮಿಯನ್ನು ಸರ್ಕಾರ ಬಹುರಾಷ್ಟ್ರೀಯ ಕಂಪನಿಗಳಿಗೆ ನೀಡುತ್ತಿದೆ.

ಖಾಸಗಿಕರಣದಿಂದಾಗಿ ದಲಿತರು ಮೀಸಲಾತಿ ಸೌಲಭ್ಯದಿಂದ ವಂಚಿತರಾಗಿದ್ದಾರೆ. ಯಾಂತ್ರಿಕರಣದಿಂದಾಗಿ ದಲಿತ ಯುವ ಸಮುದಾಯ ಉದ್ಯೋಗಾವಕಾಶಗಳಿಂದ ವಂಚಿತರಾಗಿದ್ದಾರೆ. ಶ್ರೀಮಂತರು ಮತ್ತು ಬಡವರು, ಬಂಡವಾಳಶಾಹಿ ಮತ್ತು ಕಾರ್ಮಿಕರು, ದಲಿತರು ಮತ್ತು ದಲಿತೇತರ ನಡುವಿನ ಕಂದಕಗಳು ಹೆಚ್ಚಾಗುತ್ತಿದೆ.ನಾಯಕರ ಸ್ವಾರ್ಥಪರತೆಯಿಂದಾಗಿ ಈ ಚಳವಳಿ ತಾರ್ಕಿಕ ಅಂತ್ಯವನ್ನು ಕಾಣಲಿಲ್ಲ. ನಾಯಕರು ಚಳವಳಿ ರಾಜಕಾರಣದಿಂದ ಅಧಿಕಾರ ರಾಜಕಾರಣದ ಕಡೆ ಸಾಗಿ ದಲಿತ ಚಳವಳಿಯನ್ನು ದಾರಿತಪ್ಪಿಸಿದರು ಮತ್ತು ಲಕ್ಷಾಂತರ ಚಳವಳಿಗಾರರನ್ನು ಬೀದಿಪಾಲು ಮಾಡಿದರು.

**ಜಾಗತೀಕರಣ ಯುಗದಲ್ಲಿ ದಲಿತರ ಸಬಲೀಕರಣ**

ಜಾಗತೀಕರಣವನ್ನು ಚಿಂತಕರು ನವವಸಾಹತು ವಾದವೆಂದೇ ವ್ಯಾಖ್ಯಾನಿಸಿದ್ದಾರೆ.ದ್ವಿತೀಯ ಮಹಾಯುದ್ಧದ ಅನಂತರ ವಿಶ್ವದ ಬಹುತೇಕ ರಾಷ್ಟ್ರಗಳು ರಾಜಕೀಯ ಸ್ವಾತಂತ್ರ್ಯಗಳಿಸಿ ವಸಾಹತುವಾದಿಗಳ ಕಪಿಮುಷ್ಟಿಯಿಂದ ಬಿಡುಗಡೆ ಹೊಂದಿದವು.ಜಾಗತೀಕರಣ ಪ್ರಕ್ರಿಯೆ ಆಧುನಿಕತೆಯ ಹಂತವಾಗಿದ್ದು ಇಡೀ ವಿಶ್ವವನ್ನು ಒಂದು ಪುಟ್ಟ ಹಳ್ಳಿಯಾಗಿ ಪರಿವರ್ತಿಸಿದೆ. ಜಾಗತೀಕರಣ ವಿಶ್ವರಾಜಕಾರಣವನ್ನು ನಿಯಂತ್ರಿಸುವಷ್ಟು ಬಲಿಷ್ಟವಾಗಿ ಬೆಳೆದಿದೆ. ಜಗತ್ತಿನ ವಿವಿಧ ಸಮುದಾಯಗಳ ಅಂತರವನ್ನು ಆರ್ಥಿಕವಾಗಿ ಕಡಿಮೆ ಮಾಡಿ ಆಧುನಿಕತೆಯ ಹೆಸರಿನಲ್ಲಿ ಒಂದೇ ಚಾಮರದಡಿ ತರುವ ಉದ್ದೇಶವನ್ನು ಜಾಗತೀಕರಣದ ರೂವಾರಿಗಳು ಹೊಂದಿದ್ದಾರೆ. ಜಾಗತೀಕರಣ ಯುಗದಲ್ಲಿ ವಿಶ್ವಸಂಸ್ಥೆ ಕೂಡ ನಿಷ್ಕ್ರಿಯವಾಗಿದ್ದು ಇದು ಅಮೆರಿಕಾ ನೇತೃತ್ವದ ನವ ವಸಾಹತುಶಾಹಿಯನ್ನು ಸಾಂಸ್ಥಿಕರಣಗೊಳಿಸುವ ಗೌಪ್ಯ ಕಾರ್ಯಸೂಚಿಯನ್ನು ಹೊಂದಿದೆ. ಜಾಗತೀಕರಣ ಯುಗದಲ್ಲಿ ಮಾರುಕಟ್ಟೆ ಶಕ್ತಿಗಳು ಆರ್ಥಿಕ ವ್ಯವಸ್ಥೆಯನ್ನು ತಮ್ಮ ನಿಯಂತ್ರಣದಲ್ಲಿಟ್ಟುಕೊಂಡಿವೆ. ಜಾಗತೀಕ ಅಭಿವೃದ್ಧಿ ವ್ಯವಸ್ಥೆ ಶೋಷಿತ ವರ್ಗದ ಅಭಿವೃದ್ಧಿಗೆ ಮಾರಕವಾಗಿದೆ. ಮಹಿಳೆಯರು ಮತ್ತು ದುರ್ಬಲ ವರ್ಗಗಳ ಹಿತವನ್ನು ಆಳುವ ವರ್ಗ ಅಮಾನುಷವಾಗಿ ಬಲಿಕೊಟ್ಟಿದೆ.ಗ್ರಾಮೀಣ ಪ್ರದೇಶಗಳು ಮತ್ತು ಗುಡ್ಡಗಾಡುಗಳಲ್ಲಿ ವಾಸಿಸುತ್ತಿರುವ ಮೂಲ ನಿವಾಸಿಗಳು ಅಭಿವೃದ್ಧಿ ಮುಖ್ಯವಾಹಿನಿಯಿಂದ ಹೊರದೂಡಲ್ಪಟ್ಟಿದೆ.ಅಸಮಾನತೆಯ ಹೆಚ್ಚಳ ಜಾಗತೀಕರಣದ ಪ್ರಕ್ರಿಯೆಯಲ್ಲಿ ಅಂತರ್ಗತವಾಗಿದೆ.ಜಾಗತೀಕರಣದ ಅಲೆಯಲ್ಲಿ ದೇಶಿಯ ತಂತ್ರಜ್ಞಾನಗಳು ಮತ್ತು ಕುಲಕಸುಬುಗಳು ಕಣ್ಮರೆಯಾಗುತ್ತಿದ್ದು ಕೃಷಿ ಮತ್ತು ಗುಡಿ ಕೈಗಾರಿಕೆ ಕ್ಷೇತ್ರಗಳು ನಶಿಸುತ್ತಿವೆ. ದಲಿತರು ಅವಕಾಶ ವಂಚಿತರಾಗಿ ಗುಲಾಮಗಿರಿಗೆ ಒಳಪಟ್ಟು ತಮ್ಮ ಬದುಕುವ ಮೂಲಭೂತ ಹಕ್ಕನ್ನು ಕಳೆದುಕೊಂಡಿದ್ದಾರೆ. ಇಂದು ರೈತರು, ಗುಡಿ ಕಾರ್ಮಿಕರು, ಕಾರ್ಮಿಕರು ಮತ್ತು ದುರ್ಬಲ ವರ್ಗಗಳು ಪರಾವಲಂಬಿ

ಅರ್ಥವ್ಯವಸ್ಥೆಯಲ್ಲಿ ಆತ್ಮಹತ್ಯೆ ಮಾಡಿಕೊಳ್ಳುವಂತಹ ಸ್ಥಿತಿ ನಿರ್ಮಾಣವಾಗಿದೆ.ಕೃಷಿ, ಗುಡಿಕೈಗಾರಿಕೆ ಮತ್ತಿತರ ಅಸಂಘಟಿತ ಕ್ಷೇತ್ರಗಳಲ್ಲಿ ದಲಿತರು ಅಭಿವೃದ್ಧಿ ಮುಖ್ಯವಾಹಿನಿಯ ಅಂಚಿಗೆ ತಳ್ಳಲ್ಪಟ್ಟಿದ್ದಾರೆ.

ಇಂದು ದಲಿತತ್ವ ಒಂದು ವಿಶೇಷ ಪರಿಕಲ್ಪನೆಯಾಗಿ ಬೆಳೆದಿದೆ. ಅಲಕ್ಷಿತ ಸಮುದಾಯಗಳ ಬದುಕುವ ಹಕ್ಕು ಮತ್ತು ಸಾಧ್ಯತೆಗಳನ್ನು ವೈಜ್ಞಾನಿಕವಾಗಿ ವಿಶ್ಲೇಷಿಸುವ ಹೊಸ ಬಗೆಯೊಂದನ್ನು ದಲಿತತ್ವ ಎಂದು ವ್ಯಾಖ್ಯಾನಿಸಲಾಗಿದೆ.ವಾಸ್ತವವಾಗಿ ದಲಿತ ಎಂದರೆ; ಅತ್ಯಂತ ಕಟ್ಟಕಡೆಯ ದಟ್ಟದಾರಿದ್ರ್ಯಕ್ಕೆ ಒಳಗಾಗಿರುವ ಮನುಷ್ಯನೆಂದೇ ಅರ್ಥ.ಭಾರತೀಯ ಸಂದರ್ಭದಲ್ಲಿ ಹಿಂದೂ ಸಾಮಾಜಿಕ ವ್ಯವಸ್ಥೆಯಲ್ಲಿ ಕೊನೆಯ ಸಾಲಿನಲ್ಲಿ ಉಳಿದು ಎಲ್ಲಿಯೂ ಸಲ್ಲದ ಅಸ್ಪೃಶ್ಯರನ್ನು ದಲಿತರೆಂದು ವ್ಯಾಖ್ಯಾನಿಸುವುದು ಔಚಿತ್ಯಪೂರ್ಣವಾಗಿದೆ.ಶೋಷಣೆಗೆ ಗುರಿಯಾಗಿರುವ ದಲಿತ ಸಮುದಾಯವನ್ನು ಅಭಿವೃದ್ಧಿ ಪಥದತ್ತ ಕೊಂಡೊಯ್ಯುವ ಮಾನವೀಯ ಪ್ರಕ್ರಿಯೆಯನ್ನು ದಲಿತರ ಸಬಲೀಕರಣವನ್ನು ತಜ್ಞರು ಅರ್ಥೈಸಿದ್ದಾರೆ.ಜಾಗತೀಕರಣವೆಂಬ ಪ್ರವಾಹಕ್ಕೆ ಜಾತಿವ್ಯವಸ್ಥೆಯನ್ನು ನಾಶ ಮಾಡುವ ಅಪರಿಮಿತ ಶಕ್ತಿಯಿದೆ.ದಲಿತರು ವಿದ್ಯೆ, ತರಬೇತಿ, ಪರಿಣಿತಿ, ಅಧಿಕಾರ ಸಂಪನ್ಮೂಲ ಮೊದಲಾದ ಸವಲತ್ತುಗಳಿಂದ ವಂಚಿತರಾಗಿ ಜಾಗತೀಕರಣ ಯುಗದಲ್ಲಿ ಕಟ್ಟಕಡೆಯ ಯುಗದಲ್ಲಿ ಕಟ್ಟಕಡೆಯವರಾಗಿ ಉಳಿದಿದ್ದಾರೆ. ದಲಿತರ ಪಾಲಿಗೆ ಜಾಗತೀಕರಣ ವರವೆಂದು ಭಾವಿಸುವ ಚಿಂತಕರು ನಮ್ಮ ನಡುವೆ ಇದ್ದಾರೆ. ಜಾತಿ ಮೂಲಗಳನ್ನು ನಾಶಮಾಡಿ ವಿಜ್ಞಾನ ಮತ್ತು ತಂತ್ರಜ್ಞಾನಗಳನ್ನು ಸಾಧನೆಗಳನ್ನಾಗಿ ಬಳಸಿಕೊಂಡು ಸಾಂಸ್ಕೃತಿಕ ಐಕ್ಯತೆಯ ಮೂಲಕ ವಿಶ್ವದ ಜೊತೆ ಗುರುತಿಸಿಕೊಳ್ಳುವ ಅನಿವಾರ್ಯತೆ ಇಂದು ದಲಿತರಿಗಿದೆ.

ದಲಿತರ ಆರ್ಥಿಕ ಸಬಲೀಕರಣದಲ್ಲಿ ದಲಿತ ಚಳವಳಿಯ ಪಾತ್ರವನ್ನು ಕುರಿತು ಮತ್ತೊಬ್ಬ ಚಿಂತಕರಾದ ಆನಂದ್ ತೇಲ್‌ತುಂಬ್ಡೆ (2012:05) ಅವರು ಹೀಗೆ ಚಿಂತಿಸಿದ್ದಾರೆ. "ಜಾಗತೀಕರಣೋತ್ತರ ಕಾಲಘಟ್ಟದಲ್ಲಿ ದಲಿತ ವಿಮೋಚನೆಯ ಸ್ಥಿತಿಯನ್ನು ಅರ್ಥಮಾಡಿಕೊಳ್ಳಲು ಅನುಕೂಲಕರವಾಗುವಂತೆ 4 ಪ್ರಾತಿನಿಧಿಕ ಕ್ಷೇತ್ರಗಳನ್ನು ಆರಿಸಿಕೊಳ್ಳಬಹುದು. ಮೊದಲನೆಯದು ಆರ್ಥಿಕ ಸಬಲೀಕರಣ, ಎರಡನೆಯದು ವೈಯಕ್ತಿಕ ಸಬಲೀಕರಣ, ಮೂರನೇಯದು ಸಾಮಾಜಿಕ–ರಾಜಕೀಯ ಸಬಲೀಕರಣ ಮತ್ತು ನಾಲ್ಕನೇಯದು ಸಾಂಸ್ಕೃತಿಕ ಸಬಲೀಕರಣ. ಜಾತಿ ಎಂಬ ಸಮಸ್ಯೆಯ ಜೊತೆಗೆ ಭೂಮಿಯ ಮಾಲೀಕತ್ವದ ಸಮಸ್ಯೆಯೂ ತಳಕು ಹಾಕಿಕೊಂಡಿದೆ. ಇಂದಿಗೂ ಶೇ.81ರಷ್ಟು ಮಂದಿ ದಲಿತರು ಗ್ರಾಮೀಣ ಪ್ರದೇಶಗಳಲ್ಲಿದ್ದಾರೆ. ಈ ಸಂಖ್ಯೆಯ ಅರ್ಧದಷ್ಟು ಭೂರಹಿತ ಕೃಷಿ ಕಾರ್ಮಿಕರಿದ್ದಾರೆ.ಶೇ 25ರಷ್ಟು ಸಣ್ಣ ಹಿಡುವಳಿದಾರರಿದ್ದಾರೆ. ಈ ಸ್ಥಿತಿಯೇ ದಲಿತರ ಆರ್ಥಿಕ ಸ್ಥಿತಿಯನ್ನು ಹೇಳುತ್ತದೆ. ಭೂರಹಿತ ಕೃಷಿ ಕಾರ್ಮಿಕರು ಮತ್ತು ಸಣ್ಣ ಹಿಡುವಳಿದಾತರರು ತಮ್ಮ ಕೂಲಿಗಾಗಿ ಸವರ್ಣಿಯರನ್ನು ಅವಲಂಬಿಸಬೇಕಾಗುತ್ತದೆ. ಈ ಸ್ಥಿತಿಯನ್ನು ಬದಲಾಯಿಸಲು

ಸಾಧ್ಯವಿರುವ ಒಂದೇ ಮಾರ್ಗವೆಂದರೆ: ಭೂಮಿಯ ಮರುಹಂಚಿಕೆ ಅಥವಾ ಭೂಸುಧಾರಣೆ. ಇಡೀ ದಲಿತ ಚಳವಳಿಯ ನಿರ್ದೇಶಕ ಕಾರ್ಯಸೂಚಿಗಳಲ್ಲಿ ಬಹಳ ಮಹತ್ವವುಳ್ಳದ್ದು ಶಿಕ್ಷಣ. ದಲಿತರ ರಾಜಕೀಯ ಸಬಲೀಕರಣಕ್ಕೆ ಬಹಳ ಮುಖ್ಯವಾಗಿ ಬೇಕಿರುವುದು ಪ್ರಜಾಪ್ರಭುತ್ವ. ಆಧುನಿಕರಣದ ಪ್ರಕ್ರಿಯೆಯೆಂದು ದಲಿತರ ವಿಮೋಚನೆಗೆ ಅತ್ಯವಶ್ಯಕ.ದಲಿತ ವಿಮೋಚನೆಯ ಹೋರಾಟದ ಮಟ್ಟಿಗೆ ಭಾರತದಲ್ಲಿ ಒಂದು ಹಿಮ್ಮುಖ ಚಲನೆ ನಡೆಯುತ್ತದೆ. ದಲಿತರು ತಮ್ಮ ಹಿರಿಯರು ಅನುಭವಿಸಿದ ಹಿಂಸೆಯನ್ನೆ ಹೊಸ ಸ್ವರೂಪದಲ್ಲಿ ಹೊಸ ಬಗೆಯಲ್ಲಿ ಜಾಗತೀಕರಣೊತ್ತರ ಭಾರತದಲ್ಲಿ ಎದುರಿಸುತ್ತಿದ್ದಾರೆ".

ಪ್ರಗತಿಪರ ಚಿಂತಕರು ಜಾಗತೀಕರಣ ಯುಗದಲ್ಲಿ ಪರ್ಯಾಯ ಅಭಿವೃದ್ಧಿ ರಾಜಕಾರಣದ ಹೊಸ ಅಧ್ಯಾಯವೊಂದನ್ನು ಆರಂಭಿಸಬೇಕೆಂದು ಕರೆ ನೀಡಿದ್ದಾರೆ. ಅಭಿವೃದ್ಧಿಯನ್ನು ಉಳ್ಳವರ ನೆಲೆಯಿಂದ ಪರಿಭಾವಿಸಿಕೊಳ್ಳುವುದಕ್ಕೆ ಬದಲಾಗಿ ಅಲಕ್ಷಿತ ಜನವರ್ಗಗಳಾದ ದಲಿತರು, ಆದಿವಾಸಿಗಳು, ಹಿಂದುಳಿದವರು, ಅಲ್ಪಸಂಖ್ಯಾತರು, ರೈತರು, ಕಾರ್ಮಿಕರು, ಗುಡಿಕಾರ್ಮಿಕರು ಮೊದಲಾದವರು ಪದತಲದಿಂದ ಪರಿಭಾವಿಸಿಕೊಳ್ಳಬೇಕೆಂದು ಹೆಸರಾಂತ ಅರ್ಥಶಾಜ್ಞ ಅಮಾರ್ತ್ಯಸೇನ್ (2004:06) ಅಭಿಪ್ರಾಯಪಟ್ಟಿದ್ದಾರೆ. ಪಿರಮಿಡ್ಡಿನ ಪದತಲದಿಂದ ಅಭಿವೃದ್ಧಿ ಪ್ರಕ್ರಿಯೆ ಆರಂಭಗೊಳ್ಳಬೇಕೆಂಬುದು ಪರ್ಯಾಯ ಅಭಿವೃದ್ಧಿ ಚಿಂತಕರ ಆಶಯವಾಗಿದೆ. ಉಳ್ಳವರ ಅಭಿವೃದ್ಧಿಗೆ ಪೂರಕವಾಗಿರುವ ಗದ್ದುಗೆ ರಾಜಕಾರಣವನ್ನು ನಿಲ್ಲಿಸಿ ದೀನದಲಿತರ ಅಭಿವೃದ್ಧಿಗೆ ಪೂರಕವಾದ ತೃಣಮೂಲ ಪರ್ಯಾಯ ರಾಜಕಾರಣಬೇಕೆಂದು ದಲಿತ ಚಳವಳಿಗಾರರು ವಾದಿಸಿದ್ದಾರೆ.

ಜಗತ್ತಿನ ದುರ್ಬಲ ವರ್ಗಗಳಿಗೆ ಬಂಡವಾಳಶಾಹಿ ಮೊದಲನೇ ಶತ್ರುವಾಗಿದ್ದರೆ ಭಾರತೀಯ ದಲಿತರಿಗೆ ಬ್ರಾಹ್ಮಣಶಾಹಿ ಮೊದಲನೇ ಶತ್ರುವಾಗಿದೆ. ಬ್ರಾಹ್ಮಣಶಾಹಿ ಸೃಷ್ಟಿಸಿದ ಜಾತಿವ್ಯವಸ್ಥೆಯಿಂದಾಗಿ ದಲಿತರು ನಿರಂತರವಾಗಿ ದಾಸ್ಯಕ್ಕೆ ಒಳಗಾಗಿದ್ದಾರೆ.ದಲಿತರ ಪಾಲಿಗೆ ಬ್ರಾಹ್ಮಣಶಾಹಿ ಬಂಡವಾಳಶಾಹಿಗಿಂತಲೂ ಅತ್ಯಂತ ಅಪಾಯಕಾರಿ ಶತ್ರುವಾಗಿದೆ. ಜಾಗತೀಕರಣ ಯುಗದಲ್ಲಿ ಬಂಡವಾಳಶಾಹಿ ಮತ್ತು ಬ್ರಾಹ್ಮಣಶಾಹಿಗಳು ಒಂದುಗೂಡಿ ದಲಿತರು ಮತ್ತು ದುರ್ಬಲವರ್ಗಗಳನ್ನು ಶೋಷಣೆಗೆ ಗುರಿಪಡಿಸಿವೆ. ಇದುವರೆವಿಗೂ ದಲಿತ ವರ್ಗ ಸಾಮಾಜಿಕ ಅಸ್ಪೃಶ್ಯತೆಗೆ ಗುರಿಯಾಗಿದ್ದರೆ ಇಂದು ದಲಿತವರ್ಗ ಆರ್ಥಿಕ ಅಸ್ಪೃಶ್ಯತೆಗೆ ಗುರಿಯಾಗಿದೆ.ಸಂವಿಧಾನದತ್ತವಾಗಿ ದಲಿತರಿಗೆ ಸಿಕ್ಕಿರುವ ಮೂಲಭೂತ ಹಕ್ಕುಗಳು ಮತ್ತು ರಕ್ಷಣೆಗಳನ್ನು ಬಹುರಾಷ್ಟ್ರೀಯ ಕಂಪನಿಗಳು ಇಂದು ಖಾಸಗಿಕರಣದ ಹೆಸರಿನಲ್ಲಿ ಕಸಿದುಕೊಳ್ಳುತಿವೆ. ಇವತ್ತಿನ ರಾಜಕೀಯ ಮತ್ತು ಆರ್ಥಿಕ ಪರಿಸ್ಥಿತಿಯನ್ನು ಗಮನಿಸಿದರೆ ಪರ್ಯಾಯ ರಾಜಕಾರಣ ಮತ್ತು ಪರ್ಯಾಯ ಅಭಿವೃದ್ಧಿ ಹೆಚ್ಚು ಮಹತ್ವ ಪಡೆದುಕೊಂಡಿವೆ.

ನಿ.ಮುರಾರಿ ಬಲ್ಲಾಳ (2004:07) ಜಾಗತೀಕರಣ ಯುಗದಲ್ಲಿ ದಲಿತರ ಸ್ಥಾನವನ್ನು ಹೀಗೆ ವಿಶ್ಲೇಷಿಸಿದ್ದಾರೆ. "ಜಾಗತಿಕ ಮಾರುಕಟ್ಟೆ ನೀತಿಯು ಇಂದು ನಮ್ಮ ಅಭಿವೃದ್ಧಿಯನ್ನು ನಿರ್ದೇಶಿಸುತ್ತಿರುವಾಗ ಅನಿವಾರ್ಯವಾಗಿ ಸಾಮಾಜಿಕ ವಿಭಜನೆ, ಸಂಘರ್ಷಗಳು ಇನ್ನಷ್ಟು ತೀವ್ರವಾಗುತ್ತದೆ. ಈ ದೇಶದ ಸುಮಾರು 60 ಶೇಕಡಾ ಜನರು 50 ವರ್ಷಗಳ ಅಭಿವೃದ್ಧಿ ಯೋಜನೆಯ ಅನುಷ್ಠಾನದ ಬಳಿಕವೂ ತಮಗೆ ಈ ದೇಶದಲ್ಲಿ ಬದುಕಲು ಸಾಧ್ಯವಾಗುತ್ತಿಲ್ಲ ಎಂದು ಆತ್ಮಹತ್ಯೆಯ ಮೂಲಕ ಸಾರುತ್ತಿರುವಾಗ ನಿಜಕ್ಕೂ ನಮ್ಮ ಪ್ರಗತಿಪಥದ ದೃಷ್ಟಿಧ್ಯೇಯಗಳೇನು ಎಂಬುದನ್ನು ಅನುಮಾನದಿಂದ ಶೋಧಿಸಬೇಕಾಗುತ್ತದೆ. ಆದರೆ ಈ ಅತ್ಯಂತ ಕಳವಳಕಾರಿ ವಿದ್ಯಮಾನದ ಬಗ್ಗೆ ಯಾವುದೇ ರಾಜ್ಯಸಭೆಗಳಲ್ಲಾಗಲಿ ಲೋಕಸಭೆಗಳಲ್ಲಾಗಲಿ ಗಂಭೀರವಾದ ಚಿಂತನೆಯೇ ನಡೆಯದಿರುವುದು ಮತ್ತು ದೇಶದ ರಾಷ್ಟ್ರೀಯ ಚರ್ಚೆಗಳ ಪ್ರಧಾನವಾಹಿನಿಯಲಿ ಇದು ಪ್ರಮುಖ ಅಜೆಂಡಾ ಆಗದಿರುವುದು ಅತ್ಯಂತ ವಿಷಾದದ ಸಂಗತಿ. ಭಾರತದ ವಿದೇಶಿ ವಿನಿಮಯದ ಶೇ 60ರಷ್ಟು ಇನ್ನೂ ಅಸಂಘಟಿತ ಕ್ಷೇತ್ರಗಳಿಂದ ಬರುತ್ತಿದೆ.ಜಾಗತೀಕರಣವು ಜಗತ್ತಿನ ಒಟ್ಟು ಜನಸಂಖ್ಯೆಯ 15-20 ಶೇಕಡಾ ಜನರನ್ನು ಮುಖ್ಯವಾಗಿ ದಲಿತರು ಮತ್ತು ಬುಡಕಟ್ಟು ಜನಾಂಗದವರನ್ನು ಈ ಭೂಪಟದಿಂದಲೇ ಅಳಿಸಿಹಾಕಿ ನಿರ್ನಾಮ ಮಾಡಿಬಿಡುತ್ತದೆ. ಸಮಾಜದ ಅಂಚಿನಲ್ಲಿ ವಾಸಿಸುತ್ತಿರುವವರ ಬಿಡುಗಡೆಯ ದಾರಿಯಾಗುವ ಬದಲು ಜಾಗತೀಕರಣ ಶ್ರೇಣಿಕೃತ ಸಮಾಜ ವ್ಯವಸ್ಥೆಯನ್ನು ಇನ್ನಷ್ಟು ಗಟ್ಟಿಗೊಳಿಸುತ್ತದೆ. ಅವರು ಜೀತ ಕಾರ್ಮಿಕರ ರೀತಿಯಲ್ಲಿ ದುಡಿಯಬೇಕಾದ ಸನ್ನಿವೇಶ ನಿರ್ಮಾಣವಾಗುತ್ತಿದೆ.ದಲಿತರ ಕೆಲಪಯಣ ಈ ಜಾಗತಿಕ ಆರ್ಥಿಕ ಸಂದರ್ಭದಲ್ಲಿ ಇನ್ನೂ ಬೀಕರವಾದುದ್ದು, ಅವರು ಈ ಪ್ರಕ್ರಿಯೆಯಲ್ಲಿ ಸಂಪೂರ್ಣವಾಗಿ ಅಂಚಿಗೆ ತಳ್ಳಲ್ಪಡುತ್ತಿದ್ದಾರೆ.

ಜಾಗತೀಕರಣ ಯುಗದಲ್ಲಿ ದಲಿತರ ಪಾತ್ರವನ್ನು ಕುರಿತು ಮೊಗಳ್ಳಿ ಗಣೇಶ್ (2002:08) ಹೀಗೆ ವಿಶ್ಲೇಷಿಸಿದ್ದಾರೆ. "ಜಗತ್ತಿನ ವಿಸ್ತಾರವನ್ನು ತೋರಿದ ಇಂಗ್ಲೀಷ್ ಶಿಕ್ಷಣ ಕ್ರಮ ದಲಿತರ ಪಾಲಿಗೆ ಬಿಡುಗಡೆಯ ಒಂದು ಸಾಧ್ಯತೆಯನ್ನು ತೋರಿಸಿಕೊಟ್ಟಿತು. ಯಾವುದು ಪ್ರಭುತ್ವ ಶಕ್ತಿಯಾಗಿತ್ತೊ ಯಾವುದೂ ವಸಾಹತು ಶೋಷಣೆಯಾಗಿತ್ತೋ ಅದೇ ದಲಿತರ ಪಾಲಿಗೆ ವರವಾಗಿಯೂ ಪರಿಣಮಿಸಿದ್ದು ವಿಶೇಷವಾಗಿದೆ.ಇಂತಹ ಹೊತ್ತಿನಲ್ಲಿ ಕೆಳಜಾತಿಗಳು ಆಧುನಿಕತೆಗೆ ತೆರೆದುಕೊಂಟದ್ದು ಬಿಡುಗಡೆಯ ಚರಿತ್ರೆಯಲ್ಲಿ ದೊಡ್ಡ ದಾಪುಗಾಲೆಂದೇ ತಿಳಿಯುತ್ತದೆ.ಇವತ್ತಿನ ಜಾಗತಿಕ ಸಂಬಂಧಗಳಲ್ಲಿ ವಿಶ್ಲೇಷಿಸಿದರೆ ಅಂಬೇಡ್ಕರ್ ಅವರ ಚಿಂತನೆಗಳನ್ನು ಮೀರಿಯೂ ದಲಿತ ಸಮುದಾಯಗಳು ಯೋಚಿಸಬೇಕಾಗುತ್ತದೆ.ದಲಿತ ಸಮುದಾಯಗಳು ಜಾಗತೀಕರಣಕ್ಕೆ ವಿರುದ್ಧವಾಗಿ ವರ್ತಿಸಬೇಕೆಂದು ದೇಶಿಯತೆಯ ವಾದ ಹೂಡುವ ಮೇಲ್ಜಾತಿ ಬುದ್ಧಿಜೀವಿಗಳ ಕ್ರಮದಲ್ಲೇ ಅಪಾಯವಿದ್ದಂತಿದೆ".

ದಲಿತರಿಗೆ ಮೀಸಲಾತಿ ಭಿಕ್ಷೆಯಲ್ಲ, ಮೂಲಭೂತ ಹಕ್ಕು ಎಂಬ ಅರಿವನ್ನು ದಲಿತ ಚಳವಳಿ ದೇಶದೆಲ್ಲೆಡೆ ಮೂಡಿಸಿದೆ. ಇದಕ್ಕೆ ಪೂರಕವಾಗಿ ಸ್ವಾತಂತ್ರ್ಯೋತ್ತರದಲ್ಲಿ ಅಂಬೇಡ್ಕರ್ ನಡೆಸಿದ ಐತಿಹಾಸಿಕ ಹೋರಾಟದಿಂದಾಗಿ ಮೀಸಲಾತಿಯನ್ನು ಜಾರಿಗೊಳಿಸಲಾಗಿದೆ. ಮುಕ್ತ ಮಾರುಕಟ್ಟೆ ವ್ಯವಸ್ಥೆ ಸಾಮಾಜಿಕ ನ್ಯಾಯದ ಹಂಗಿಲ್ಲದೇ ಇರುವುದರಿಂದ ಅದು ಮೀಸಲಾತಿ ಹಾಗೂ ತುಳಿತಕ್ಕೊಳಗಾದ ದಲಿತ ಸಮುದಾಯದ ವಿರೋಧಿಯಾಗಿ ಪರಿಣಮಿಸಿದೆ.ಸಮಕಾಲೀನ ಮೀಸಲಾತಿ ಕುರಿತು ಎಸ್. ಜಾಫೆಟ್ (2012:09) ಹೀಗೇ ಬರೆದಿದ್ದಾರೆ."ಸದ್ಯಕ್ಕೆ ಇರುವ ಮೀಸಲಾತಿ, ಐಸಿಯುನಲ್ಲಿರುವ ರೋಗಿಯನ್ನು ಕೃತಕ ಉಳಿಕೆ ವ್ಯವಸ್ಥೆಯಲ್ಲಿ ಜೀವಂತವಾಗಿ ಇರಿಸಿದಂತಾಗುತ್ತದೆ.ಶಿಕ್ಷಣ, ಆರೋಗ್ಯ, ಉದ್ಯೋಗ ಇತ್ಯಾದಿ ಸಾರ್ವಜನಿಕ ವಲಯಗಳು ದೇಶದ ಸಂಪತ್ತನ್ನು ಖಾಸಗಿವಲಯಕ್ಕೆ ಧಾರೆ ಎರೆದು ಕೊಡುತ್ತಿರುವ ಸಂದಿಗ್ಧ ಪರಿಸ್ಥಿತಿಯನ್ನು ನೋಡುತ್ತಿದ್ದೇವೆ. ಖಾಸಗೀಕರಣವು ಮೂಲಭೂತವಾಗಿ ರಚನಾತ್ಮಕ ಅಸಮಾನತೆಯ ಮೇಲೆ ನಿಂತಿದೆ.ಈ ಅಸಮಾನತೆ ಜಾತಿ ಪದ್ಧತಿಯಿಂದ ನರಳುತ್ತಿರುವ ಸಮಾಜದ ರಚನೆಯನ್ನು ಹೋಲುತ್ತದೆ. ಆದ್ದರಿಂದ ಬಂಡವಾಳಶಾಹಿಗೂ, ಜಾತಿ ಸಮಾಜದ ಆಶಯ, ರಚನೆಗೂ ಸಾಮ್ಯತೆಗಳಿವೆ. ಭಾರತದಲ್ಲಿ ಮೀಸಲಾತಿ ಸರ್ಕಾರಿ ಕ್ಷೇತ್ರಕ್ಕೆ ಮಾತ್ರ ಸೀಮಿತವಾಗಿದ್ದರೆ ಅಮೆರಿಕಾ, ಉತ್ತರ ಐರ್ಲ್ಯಾಂಡ್, ದಕ್ಷಿಣ ಆಫ್ರಿಕಾ, ಮಲೇಶಿಯಾದಂತ ದೇಶಗಳಲ್ಲಿ ಮೀಸಲಾತಿಯಂತಹ ದೃಢಸಂಕಲ್ಪ ನೀತಿಗಳು ಸಾರ್ವಜನಿಕ ಮತ್ತು ಖಾಸಗಿವಲಯಗಳಲ್ಲಿ ಜಾರಿಯಲ್ಲಿವೆ. ಕೇವಲ ಔಪಚಾರಿಕ ಹಕ್ಕುಗಳಾಗಿ ಮೀಸಲಾತಿ ಉಳಿಯದೇ ಇದರ ಚಾಲನೆ ಮತ್ತು ಕಾರ್ಯಗತಕ್ಕೆ ಸಂಬಂಧಪಟ್ಟ ಕಾನೂನುಗಳು ಮತ್ತು ಸಂಸ್ಥೆಗಳು ಇರುವುದನ್ನು ಗಮನಿಸಬಹುದು. ಭಾರತೀಯ ಸಂವಿಧಾನದ ಆಶಯಗಳಿಗೆ ಅನುಗುಣವಾಗಿ ಈ ದೇಶದ ಅಪಾರ ಜನರ ಸಾಮಾನ್ಯ ಜೀವನಮಟ್ಟ ಸುಧಾರಿಸಲು ಸರ್ಕಾರವೇ ಖಾಸಗಿ ಕ್ಷೇತ್ರದಲ್ಲಿ ಕಡ್ಡಾಯ ಮೀಸಲು ನೀಡಲೇಬೇಕೆಂಬ ಆದೇಶ ಹೊರಡಿಸಬೇಕಿದೆ".

ಇತ್ತೀಚಿನ ವರ್ಷಗಳಲ್ಲಿ ಭಾರತ ಆರ್ಥಿಕತೆಯನ್ನು ಅರ್ಥಶಾಸ್ತ್ರಜ್ಞರು ಗಂಭೀರವಾಗಿ ಅವಲೋಕಿಸುತ್ತಿದ್ದಾರೆ. ಭಾರತ 2040ರ ಹೊತ್ತಿಗೆ ವಿಶ್ವದಲ್ಲಿಯೇ ಸರ್ವಶಕ್ತ ದೇಶವಾಗಿ ಹೊರಹೊಮ್ಮುತ್ತದೆಂದು ಆರ್ಥಿಕ ತಜ್ಞರು ಭರವಸೆಯಿಂದ ನುಡಿದ್ದಿದ್ದಾರೆ.ಇನ್ನೂ 19 ವರ್ಷಗಳಲ್ಲಿ ಭಾರತ ಪ್ರಬಲ ಆರ್ಥಿಕ ಶಕ್ತಿಯಾಗಿ ಬೆಳೆದು ವಿಶ್ವದ ಅಭಿವೃದ್ಧಿ ಹೊಂದಿದ ರಾಷ್ಟ್ರಗಳ ಸಾಲಿನಲ್ಲಿ ನಿಲ್ಲುತ್ತದೆಂಬ ಮಾತುಗಳು ಜನರಲ್ಲಿ ರೋಮಾಂಚನ ಉಂಟುಮಾಡುತ್ತದೆ. ವಾಸ್ತವವಾಗಿ ಭಾರತ ವಿಶ್ವದ ಬಲಾಢ್ಯ ಆರ್ಥಿಕ ಶಕ್ತಿಯಾಗಿ ರೂಪಗೊಳ್ಳಬೇಕಾದರೆ ಮೊದಲು ಅನುಸರಿಸಬೇಕಾದದ್ದು ಅಂಬೇಡ್ಕರ್ ಅವರ ಅಂತ್ಯೋದಯ ಅಭಿವೃದ್ಧಿ ಮಾದರಿಯನ್ನು ಎಲ್ಲಿಯ ತನಕ ಹೈಕಮಾಂಡ್ ಕೇಂದ್ರಿತ ಅಭಿವೃದ್ಧಿ ಮಾದರಿಯನ್ನು ಅನುಸರಿಸುವುದೋ ಅಲ್ಲಿಯ ತನಕ ಭಾರತ ಆರ್ಥಿಕವಾಗಿ ಲೋಕಮ್ಯಾಂಡ್ ಆಗಿ ಉಳಿಯುವುದು. ಅಭಿವೃದ್ಧಿಯ ಫಲ ಮೊಟ್ಟಮೊದಲು ಈ ನೆಲದ ಕಟ್ಟಕಡೆಯ ಮನುಷ್ಯನಿಗೆ

ತಲುಪಬೇಕು.ಮೇಲ್ಮುಖ ಅಭಿವೃದ್ಧಿ, ಸಮಾನಾಂತರ ಅಭಿವೃದ್ಧಿ, ಒಳಗೊಳ್ಳುವ ಅಭಿವೃದ್ಧಿ, ಸುಸ್ಥಿರ ಅಭಿವೃದ್ಧಿ ಮತ್ತು ಸಮಗ್ರ ಅಭಿವೃದ್ಧಿಯ ಆಶಯಗಳನ್ನು ನೀತಿ ನಿರೂಪಕರು ಮತ್ತು ಯೋಜನಾ ತಜ್ಞರು ಸರಿಯಾಗಿ ಅರ್ಥಮಾಡಿಕೊಳ್ಳಬೇಕು. ಅತ್ಯಂತ ಹಿಂದುಳಿದ ಗ್ರಾಮೀಣ ಮತ್ತು ಗುಡ್ಡಗಾಡು ಪ್ರದೇಶಗಳು ಮತ್ತು ಅತ್ಯಂತ ಶೋಷಿತ ದಲಿತ, ಹಿಂದುಳಿದ, ಅಲ್ಪಸಂಖ್ಯಾತ ಮತ್ತು ಮಹಿಳಾ ಸಮುದಾಯಗಳ ಸರ್ವತೋಮುಖ ಅಭಿವೃದ್ಧಿಗೆ ಭಾರತ ಆದ್ಯತೆ ನೀಡಬೇಕು. ಬಹುಮುಖ್ಯವಾಗಿ ಈ ದೇಶದ ಆರ್ಥಿಕ ಸಂಪತ್ತನ್ನು ಸೃಷ್ಟಿಸಿರುವ ದಲಿತ ಜನಸಮುದಾಯಕ್ಕೆ ನ್ಯಾಯೋಚಿತವಾಗಿ ಸಿಗಬೇಕಾದ ಪ್ರಾಮುಖ್ಯತೆಯನ್ನು ನೀಡಿ ಅವರನ್ನು ಆರ್ಥಿಕ ಅಭಿವೃದ್ಧಿಯೆಡೆಗೆ ಸಂವಿಧಾನದ ಆಶಯಗಳಿಗನುಗುಣವಾಗಿ ಕೊಂಡೊಯ್ಯುವುದರಿಂದ ಭಾರತದ ಅಭಿವೃದ್ಧಿಗೆ ಅಂತರರಾಷ್ಟ್ರೀಯ ಮಟ್ಟದಲ್ಲಿ ಮರ್ಯಾದೆ ಲಭಿಸುತ್ತದೆ.

**ಉಪಸಂಹಾರ**

ಅಂಬೇಡ್ಕರ್ ಅವರು ನೊಬೆಲ್ ಪ್ರಶಸ್ತಿ ವಿಜೇತ ಅಮಾರ್ತ್ಯಸೇನ್ ನುಡಿದಂತೆ ವಿಶ್ವಶ್ರೇಷ್ಠ ಅರ್ಥಶಾಸ್ತ್ರಜ್ಞರು.ಅಂಬೇಡ್ಕರ್ ಅವರು ಮಾನವೀಯತೆಯ ನೆಲೆಗಟ್ಟಿನಲ್ಲಿ ಭಾರತದ ಆರ್ಥಿಕ ವ್ಯವಸ್ಥೆ ಮತ್ತು ದಲಿತರ ಸಮಸ್ಯೆಗಳನ್ನು ಅಮೂಲಾಗ್ರವಾಗಿ ವಿಶ್ಲೇಷಿಸಿದರು.ಅವರಿಗೆ ರಾಜಕೀಯ ಸ್ವಾತಂತ್ರ್ಯಕಿಂತ ಮಿಗಿಲಾಗಿ ಆರ್ಥಿಕ ಸ್ವಾತಂತ್ರ್ಯ ದಲಿತ ಸಮುದಾಯಕ್ಕೆ ಬಹಳ ಮುಖ್ಯವಾಗಿತ್ತು.ಜಾತಿ ವಿನಾಶ, ಭೂಮಿಯ ರಾಷ್ಟ್ರೀಕರಣ, ಸಾಮೂದಾಯಿಕ ಕೃಷಿ, ಸಹಕಾರಿ ಮನೋಧರ್ಮ, ಸರ್ಕಾರಿ ನಿಯಂತ್ರಣದ ಉತ್ಪಾದನಾ ವ್ಯವಸ್ಥೆ, ಮೂಲಭೂತ ಸೌಕರ್ಯಗಳ ಅಭಿವೃದ್ಧಿ, ಅಂತ್ಯೋದಯ, ಸಹಭಾಗಿತ್ವ ಆಧರಿಸಿದ ಅಭಿವೃದ್ಧಿಯಂತಹ ಸಾಧನಗಳಿಂದ ಭಾರತದ ಅರ್ಥವ್ಯವಸ್ಥೆಯನ್ನು ಪುನಾರಚಿಸಬೇಕೆಂದು ಅಂಬೇಡ್ಕರ್ ಅವರು ಬಯಸಿದ್ದರು. ಭಾರತದ ದಲಿತ ಚಳವಳಿ ಅಂಬೇಡ್ಕರ್‌ವಾದದ ಮುಂದುವರೆದ ಭಾಗವೇ ಆಗಿದೆ.ಕರ್ನಾಟಕದಲ್ಲಿ ದಲಿತ ಸಂಘರ್ಷ ಸಮಿತಿ ದಲಿತರ ಭೂಮಿಯ ಹಕ್ಕು, ಉದ್ಯೋಗ ಹಕ್ಕು, ಮೂಲಭೂತ ಸೌಕರ್ಯಗಳು, ಸಾಮಾಜಿಕ ಸುರಕ್ಷತೆ, ಆರ್ಥಿಕ ನ್ಯಾಯದಂತ ವಿಚಾರಗಳನ್ನು ಗಂಭೀರವಾಗಿ ಕೈಗೆತ್ತಿಗೊಂಡು ಹೋರಾಟ ನಡೆಸಿತು.ಜಾಗತೀಕರಣ ಯುಗದಲ್ಲಿ ದಲಿತರು ಆರ್ಥಿಕವಾಗಿ ಅಭಿವೃದ್ಧಿ ಮುಖ್ಯವಾಹಿನಿಯಿಂದ ಹೊರಗುಳಿದಿದ್ದಾರೆ. ಅಂಬೇಡ್ಕರ್ ಅವರ ಆರ್ಥಿಕ ವಿಚಾರಧಾರೆಗಳನ್ನು ಆಧರಿಸಿದ ದಲಿತರು ಒಳಗೊಳ್ಳುವ ಅಭಿವೃದ್ಧಿಯ ಪರಿಕಲ್ಪನೆಗೆ ಇಂದು ವಿಶೇಷ ಮಹತ್ವ ಲಭಿಸಿದೆ.ಜಾಗತಿಕವಾಗಿ ಚಿಂತಿಸುವ ಮತ್ತು ಸ್ಥಳೀಯವಾಗಿ ವ್ಯವಹರಿಸುವ ಮನೋಧರ್ಮವನ್ನು ಆಳುವ ವರ್ಗ ಮೈಗೂಡಿಸಿಕೊಳ್ಳಬೇಕಾಗಿದೆ. ದಲಿತರು ಅಭಿವೃದ್ಧಿಯೆಡೆಗೆ ಪ್ರಯಾಣ ಮಾಡಬೇಕಾದರೆ ಸಣ್ಣ ದೋಣಿಯನ್ನಷ್ಟೆ ಅವಲಂಬಿಸಬಾರದು. ಅವರು ಒಂದು ಬೃಹತ್ ಹಡಗಿನಲ್ಲಿ ರೈತರು, ಕಾರ್ಮಿಕರು,

ಹಿಂದುಳಿದವರು, ಅಲ್ಪಸಂಖ್ಯಾತರು, ಮಹಿಳೆಯರು ಮತ್ತಿತರ ಶೋಷಿತ ಜನವರ್ಗಗಳೊಂದಿಗೆ ಕೂಡಿ ಅಭಿವೃದ್ಧಿಯಾನವನ್ನು ಮುಂದುವರೆಸಯವುದರಿಂದ ಉದ್ದೇಶಿತ ಗುರಿ ಮುಟ್ಟಲು ಸಾಧ್ಯವಾಗುತ್ತದೆ.ದಲಿತ ಚಳವಳ ಅಂಬೇಡ್ಕರ್ ವಾದವನ್ನು ನಾಡಿನೆಲ್ಲೆಡೆ ಗಟ್ಟಿಯಾಗಿ ಬೆಳೆಸುವಲ್ಲಿ ಯಶಸ್ವಿಯಾಗಿದೆ. ಆದರೆ ಸಾಮಾಜಿಕ-ಆರ್ಥಿಕ ಅರ್ಥದಲ್ಲಿ ಸಮಸಮಾಜವನ್ನು ಕಟ್ಟುವ ನಿಟ್ಟಿನಲ್ಲಿ ಇಂದು ಕವಲುದಾರಿಯಲ್ಲಿರುವ ದಲಿತ ಚಳವಳ ಅಂಬೇಡ್ಕರ್ ತೋರಿಸಿದ ರಾಜಮಾರ್ಗದಲ್ಲಿ ಮುನ್ನೇಡೆದು ದಲಿತ ಸಮುದಾಯವನ್ನು ಆರ್ಥಿಕವಾಗಿ ಸಬಲೀಕರಣಗೊಳಿಸುವ ಸಾಮಾಜಿಕ ಜವಾಬ್ದಾರಿಯನ್ನು ಜಾಗತೀಕರಣ ಯುಗದಲ್ಲಿ ಹೊಂದಿದೆ.ಪ್ರಸ್ತುತ ಸಂದರ್ಭದಲ್ಲಿ ಪರ್ಯಾಯ ರಾಜಕಾರಣ ಆರ್ಥಿಕ ಪರಿವರ್ತನೆಗೆ ಮತ್ತು ಸಾಮಾಜಿಕ ನ್ಯಾಯ ವಿತರಣೆಗೆ ಭಾರತದಂತ ಅಭಿವೃದ್ಧಿಶೀಲ ದೇಶದಲ್ಲಿ ಅವಶ್ಯಕ.ದಲಿತರು ಜಾತಿವ್ಯವಸ್ಥೆಯನ್ನು ಮೀರಿ ವೈಚಾರಿಕತೆ, ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವ, ಮಾನವೀಯತೆ ಮೊದಲಾದ ಮೌಲ್ಯಗಳನ್ನು ಆಧರಿಸಿದ ಸಮಸಮಾಜವನ್ನು ಕಟ್ಟುವ ನಿಟ್ಟಿನಲ್ಲಿ ಜಾಗತೀಕರಣ ಯುಗವನ್ನು ಒಂದು ಅವಕಾಶವನ್ನಾಗಿ ಗಳಿಸಿಕೊಳ್ಳುವ ಸಾಮಾರ್ಥ್ಯ ಗಳಿಸಿಕೊಳ್ಳಬೇಕು. ದೇಶಿಯತೆಯ ವಾದ ಹೂಡುವ ಬ್ರಾಹ್ಮಣಶಾಹಿಯ ಹುನ್ನಾರವನ್ನು ಅರ್ಥಮಾಡಿಕೊಳ್ಳಬೇಕು.

## ಗ್ರಂಥಋಣ


1. ರೋಡ್ರಿಗಸ್, ವೆಲೇರಿಯನ್ (2002) 'ದ ಎಸ್ಸೆನ್ಷಿಯಲ್ ರೈಟಿಂಗ್ಸ್ ಆಫ್ ಬಿ.ಆರ್ ಅಂಬೇಡ್ಕರ್' (ಸಂ) ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್, ನ್ಯೂ ಡೆಲ್ಲಿ, ಪು205-218
2. ಮಂಗೂಕರ್,ಎಂ.ಪಿ. (1997) 'ಡಾ.ಅಂಬೇಡ್ಕರ್ ಅಂಡ್ ಪಾರ್ಲಿಮೆಂಟರಿ ಡೆಮಾಕ್ರಸಿ', ಸುಗಾವ ಪ್ರಕಾಶನ್, ಪುಣೆ
3. ಸೇನ್, ಅಮಾರ್ತ್ಯ (2009) 'ಎ ನ್ಯೂ ಪ್ಯಾರಡೈಮ್ ಆಫ್ ಡೆವಲಪ್‌ಮೆಂಟ್ ಇನ್ ಇಂಡಿಯಾ; ಅಂಬೇಡ್ಕರ್ ವಿಸನ್', ಎಕನಾಮಿಕ್ ಅಂಡ್ ಪೊಲಿಟಿಕಲ್ ವೀಕ್ಲಿ ಆಫ್ ಇಂಡಿಯಾ, ಜನವರಿ-ಮಾರ್ಚ್, 2009, ಪು.692-701
4. ಗಣೇಶ್, ಮೊಗಳ್ಳಿ (2005) ಪರ್ಯಾಯ ರಾಜಕಾರಣದ ತಾತ್ವಿಕತೆ, (ಸಂ) ಪಿ. ಮಹದೇವಯ್ಯ, ದಲಿತರು ಮತ್ತು ಪರ್ಯಾಯ ರಾಜಕಾರಣ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು.34-47.
5. ತೇಲ್‌ತುಂಬ್ಡೆ, ಆನಂದ್ (2012) ದಲಿತರ ಮೋಕ್ಷದ ದಾರಿಯಲ್ಲಿ ದಲಿತ ವಿಶೇಷ ಸಂಚಿಕೆ, ಪ್ರಜಾವಾಣಿ, 07(104):7, ಏಪ್ರಿಲ್ 14, ಬೆಂಗಳೂರು.

6. ಸೇನ್, ಅಮಾರ್ತ್ಯ(2004) ಸೋಷಿಯಲ್ ಎಕ್ಸ್ಲೂಶನ್: ಕಾನ್ಸೆಪ್ಟ್, ಅಪ್ಲಿಕೇಶನ್ ಅಂಡ್ ಸ್ಕ್ರೂಟಿನಿ, ಕ್ರಿಟಿಕಲ್ ಕ್ವೆಸ್ಟ್, ನ್ಯೂ ಡೆಲ್ಲಿ.

7. ಬಲ್ಲಾಳ, ನಿ. ಮುರಾರಿ (2004) ಬುಡಕಟ್ಟು ಅಭಿವೃದ್ಧಿ ಪರಿಕಲ್ಪನೆ ಮತ್ತು ಮೀಮಾಂಸೆ, (ಸಂ) ಎ.ಎಸ್.ಪ್ರಭಾಕರ, ಬುಡಕಟ್ಟು ಅಭಿವೃದ್ಧಿ ಮೀಮಾಂಸೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ, ಪುಟ.95–110.

8. ಗಣೇಶ, ಮೊಗಳ್ಳಿ (2002) ದಲಿತರು ಮತ್ತು ಜಾಗತೀಕರಣ, ದಲಿತ ಚಿಂತನೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಕರ್ನಾಟಕ.

**9**. ಜಾಫೆಟ್, ಎಸ್. (2002) ಭಿಕ್ಷೆಯಲ್ಲ – ಹಕ್ಕು, ದಲಿತ ವಿಶೇಷ ಸಂಚಿಕೆ, ಪ್ರಜಾವಾಣಿ, 07 (104) : 6, ಏಪ್ರಿಲ್ 14, ಬೆಂಗಳೂರು.